ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 10 | ಮಾರ್ಚ್ 9, 1980 | 40 ಪೈಸೆ

ಜಿಂಬಾಬ್ವೆ ಜನತೆಯ ಅದ್ಭುತ ಜಯ

ಸುಮಾರು 90 ವರ್ಷಗಳಿಂದ ವಿದೇಶೀಯರ ಗುಲಾಮಗಿರಿಯಲ್ಲಿ ನರಳುತ್ತಿದ್ದ ಜಿಂಬಾಬ್ವೆ (ಹಿಂದಿನ ರೊಡೇಷಿಯಾ) ಯಲ್ಲಿ ಈಗ ನಡೆದ ಚುನಾವಣೆಯಲ್ಲಿ ಮುಗಾಬೆಯವರ ನೇತೃತ್ವದ ಜಿಂಬಾಬ್ವೆ ಆಫ್ರಿಕನ್ ನ್ಯಾಷನಲ್ ಯೂನಿಯನ್‌ಗೆ ಅದ್ಭುತವಾದ ಬಹುಮತ ದೊರೆತು ಜಯ ದೊರೆತಿದೆ. ಜಿಂಬಾಬ್ವೆಯ ಬ್ರಿಟಿಷ್ ಗವರ್ನರ್ ಕ್ರಿಸ್ಟಾಫರ್ ಸೋಮ್ಸ್‌ರವರು ರಾಬರ್ಟ್ ಮುಗಾಬೆಯವರಿಗೆ ಸರಕಾರ ರಚಿಸಲು ಆಮಂತ್ರಣ ನೀಡಿದ್ದಾರೆ. ಇದು ಅಲ್ಲಿಯ ಜನತೆಗೆ ದೊರೆತ ಚಾರಿತ್ರಿಕ ಜಯ.

ಅಲ್ಪಸಂಖ್ಯಾತ ಬಿಳಿಜನರು ಬಹುಸಂಖ್ಯಾತರಾದ ಕರಿಜನರ ಮೇಲೆ ಅನಾಗರಿಕ ರೀತಿಯಲ್ಲಿ ಶೋಷಣೆ, ದಬ್ಬಾಳಿಕೆ ನಡೆಸಿಕೊಂಡು ಬಂದ ರಾಷ್ಟ್ರಗಳಲ್ಲಿ ಜಿಂಬಾಬ್ವೆ ಒಂದಾಗಿದೆ. ದಕ್ಷಿಣ ಆಫ್ರಿಕಾದ ಪ್ರಭಾವಕ್ಕೊಳಗಾಗಿದ್ದ ರಾಷ್ಟ್ರವಿದು. ಅಲ್ಲಿಯ ಸಂಪತ್ತನ್ನು ದೋಚಿಸುತ್ತಿರುವ ಸಾಮ್ರಾಜ್ಯಶಾಹಿ (ಮುಖ್ಯವಾಗಿ ಬ್ರಿಟಿಷ್ ಮತ್ತು ಅಮೇರಿಕ) ಶಕ್ತಿಗಳು ಅಲ್ಲಿಯ ಸ್ವಾತಂತ್ರ್ಯ ಚಳುವಳಿಯನ್ನು ದಮನಮಾಡಲು ಶತಪ್ರಯತ್ನ ನಡೆಸಿವೆ. ಆದರೂ ಅಲ್ಲಿಯ ಹೋರಾಟಕ್ಕೆ ಬ್ರಿಟನ್ ಈಗ ಮಣಿಯಬೇಕಾಗಿ ಬಂದಿದೆ.

ಸಂಪಾದಕೀಯ

ಇತ್ತೀಚೆಗೆ ನಡೆದ ಸಶಸ್ತ್ರಗೊರಿಲ್ಲಾ ಹೋರಾಟಕ್ಕೆ ಸಾಮ್ರಾಜ್ಯಶಾಹಿ ಶರಣಾಗತವಾಗಬೇಕಾಯಿತು. ಈ ಹೋರಾಟ ತೀವ್ರಗೊಂಡಾಗ ಬ್ರಿಟನ್‌ನಲ್ಲಿ ಎಲ್ಲ ಪಕ್ಷಗಳ ಸಭೆ ನಡೆದು ಅದರಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆ ನಡೆಯಬೇಕೆಂದೂ, ನೂರು ಸದಸ್ಯರ ಲೋಕಸಭೆಗೆ ಚುನಾವಣೆ ನಡೆದು ಅದರಲ್ಲಿ 20 ಸ್ಥಾನಗಳನ್ನು ಬಿಳಿಯರಿಗೆ ಮೀಸಲಾಗಿಟ್ಟು ಉಳಿದ 80 ಸ್ಥಾನಗಳಲ್ಲಿ ಜಿಂಬಾಬ್ವೆಯವರಿಗೆ ಪ್ರಾತಿನಿಧ್ಯವಿರಬೇಕೆಂದೂ, ಚುನಾವಣೆಯ ನಂತರ ಆರಿಸಲ್ಪಟ್ಟ ಪ್ರತಿನಿಧಿಗಳಿಗೆ ಅಧಿಕಾರವನ್ನು ವರ್ಗಾಯಿಸಿ ಬ್ರಿಟಿಷರು ಅಲ್ಲಿಂದ ಕಾಲ್ತೆಗೆಯಬೇಕೆಂದೂ ತೀರ್ಮಾನವಾಗಿತ್ತು. ಅದರಂತೆ ಬಿಳಿಯರಿಗೆ ಕಾದಿಟ್ಟ ಸ್ಥಾನಗಳು ಮಾಜಿ ಪ್ರಧಾನಿಯಾಗಿದ್ದ ಲಿಯನ್ ಸ್ಮಿತ್‌ರವರ ಪಕ್ಷಕ್ಕೆ ದೊರೆತಿವೆ. ಉಳಿದ 80 ಸ್ಥಾನಗಳಲ್ಲಿ 57 ಸ್ಥಾನಗಳು ಮಾರ್ಕ್ಸ್‌ವಾದಿಯೆಂದು ಪ್ರಸಿದ್ಧಿಯಾದ ಮುಗಾಬೆಯವರ ಪಕ್ಷಕ್ಕೂ, 20 ಸ್ಥಾನಗಳು ಇನ್ನೊಂದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದ ಎನ್‌ಕೋಮೋರವರ ಪಕ್ಷಕ್ಕೂ, ಮೂರು ಸ್ಥಾನಗಳು ಸ್ವಾತಂತ್ರ್ಯ ವಿರೋಧಿ ಗುಂಪಿಗೂ ದೊರೆತಿದೆ. ಈಗ ಮುಗಾಬೆಯವರು ಸರಕಾರ ರಚನೆಮಾಡುವಾಗ ಎನ್‌ಕೋಮೋರವರೊಂದಿಗೆ ಸೇರಿ ಸಂಯುಕ್ತ ಸರಕಾರ ಮಾಡುವ ಆಶ್ವಾಸನೆ ನೀಡಿರುವುದಲ್ಲದೆ ಇತರರ ಸಹಕಾರವನ್ನೂ ಕೋರಿದ್ದಾರೆ.

[ಕಡೆಯ ಪುಟ ನೋಡಿ]

ದೇಶದ ವಿದ್ಯಮಾನಗಳ ಬಗ್ಗೆ ಪೊಲಿಟ್‌ಬ್ಯೂರೊ ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋವು ಫೆಬ್ರವರಿ 25 ಮತ್ತು 26ರಂದು ನವದೆಹಲಿಯಲ್ಲಿ ಸಭೆ ಸೇರಿ ದೇಶದ ವಿದ್ಯಮಾನಗಳನ್ನು ವಿಮರ್ಶಿಸಿತು.

ಕಾಂಗ್ರೆಸ್ (ಐ) ಆಳಿಕೆಯಿಲ್ಲದ ರಾಜ್ಯಗಳ ವಿಧಾನಸಭೆಗಳ ವಿಸರ್ಜನೆಯನ್ನು ವಿರೋಧ ಪಕ್ಷಗಳು ಒಕ್ಕೊರಲಿನಿಂದ ವಿರೋಧಿಸಿದ ಬಗ್ಗೆ ಪೊಲಿಟ್‌ಬ್ಯೂರೊ ತೃಪ್ತಿ ವ್ಯಕ್ತಪಡಿಸಿ, ಈ ಒಗ್ಗಟ್ಟು ಆ ವಿಧಾನಸಭೆಗಳ ಚುನಾವಣೆ ಸಮಯದಲ್ಲೂ ಮುಂದುವರೆಯುವುದೆಂದು ಆಶಿಸಿತು. ಫೆಬ್ರವರಿ 24ರ ಲೋಕಸಭೆ ಉಪಚುನಾವಣೆಗಳ ಫಲಿತಾಂಶದಿಂದ ಪಾಠ ಕಲಿಯುವಂತೆ ಸರ್ವಾಧಿಕಾರ ವಿರೋಧಿ ಶಕ್ತಿಗಳಿಗೆ ಪೊಲಿಟ್‌ಬ್ಯೂರೊ ಮನವಿ ಮಾಡಿತು. ಸರ್ವಾಧಿಕಾರ ವಿರೋಧಿ ಶಕ್ತಿಗಳ ಐಕ್ಯತೆಗೆ ಭಂಗ ತರುತ್ತಿರುವ ಆರ್.ಎಸ್.ಎಸ್.-ಜನಸಂಘದ ಕೋಮುವಾದಿ ದೃಷ್ಟಿಕೋನವನ್ನು ತೊಡೆದುಕೊಳ್ಳಬೇಕೆಂದು ಹೇಳಿತು. ದ್ವಿಸದಸ್ಯತ್ವ ಪ್ರಶ್ನೆ ಬಗೆಹರಿಯಬೇಕಾದ್ದು ಅತಿ ಮುಖ್ಯ ಎಂದೂ ಪೊಲಿಟ್‌ಬ್ಯೂರೊ ಹೇಳಿತು.

ಪಶ್ಚಿಮ ಬಂಗಾಳದ ವಿಜಯಕ್ಕೆ ಕಾರಣಕರ್ತರಾದ ಎಲ್ಲರಿಗೆ ಪೊಲಿಟ್‌ಬ್ಯೂರೊ ವಂದನೆ ಸಲ್ಲಿಸಿತು. ಸರ್ವಾಧಿಕಾರಿ ಶಕ್ತಿಯನ್ನು ಹೊಡೆದೋಡಿಸಲು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯಿಂದ ಮಾತ್ರ ಸಾಧ್ಯ ಎಂದು ಅದು ಅಭಿಪ್ರಾಯಪಟ್ಟಿತು. ಉಪಚುನಾವಣೆಯಲ್ಲಿನ ಕಾಂಗ್ರೆಸ್ (ಐ) ವಿಜಯದಿಂದ ಸರ್ವಾಧಿಕಾರ ವಿರೋಧಿ ಶಕ್ತಿಗಳು ನಿರಾಶರಾಗಬೇಕಾದ್ದಿಲ್ಲ. ಇನ್ನೂ ಹೆಚ್ಚು ಮತಗಳಿಸಲು ಪ್ರಯತ್ನಿಸಬಹುದು ಎಂದು ಸೂಚಿಸಿತು.

ರಾಜಕೀಯ ಪರಿಸ್ಥಿತಿಗಳ ವರದಿಗಳನ್ನು ಪರೀಕ್ಷಿಸಿದ ಪೊಲಿಟ್‌ಬ್ಯೂರೊ ಕೆಲವು ತಾತ್ಕಾಲಿಕ ಸಲಹೆಗಳನ್ನು ಕೇಂದ್ರಸಮಿತಿಯ ಮಾರ್ಚ್ 14, 15 ಮತ್ತು 16ರ ಸಭೆಯ ಮುಂದೆ ಇಡಲು ತೀರ್ಮಾನಿಸಿತು. ಜನವರಿ 80ರ ವರೆಗೆ ಮತದಾರ ಪಟ್ಟಿಯನ್ನು ಪರಿಷ್ಕರಿಸಿದರೆ ಮತದಾನ ಸರಿಯಾಗಿ ನಡೆಯುತ್ತದೆ. ಇದರ ಬಗ್ಗೆ ಚುನಾವಣಾ ಕಮಿಷನ್‌ಗೆ ಪೊಲಿಟ್‌ಬ್ಯೂರೊ ಕೆಲವು ಸಲಹೆಗಳನ್ನು ಕೊಟ್ಟಿತು. ಸಕ್ಕರೆ ಮುಂತಾದ ಅಗತ್ಯ ವಸ್ತುಗಳ ಬಿಕ್ಕಟ್ಟಿನ ಬಗ್ಗೆ ಅದು

[ಕಡೆಯ ಪುಟ ನೋಡಿ]

ಹೋರಾಟದಲ್ಲಿರುವ ಕಾರ್ಮಿಕರ ಬೆಂಬಲಕ್ಕಾಗಿ

೧೨-೩-೮೦ ರಂದು ರಾಜ್ಯಾದ್ಯಂತ ಸೌಹಾರ್ದ ದಿನಾಚರಣೆಗೆ ಸಿಐಟಿಯು ಕರ್ನಾಟಕ ರಾಜ್ಯಸಮಿತಿಯ ಕರೆ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಸಭೆಯು ತಾ॥ 2-3-80 ರಂದು ಬೆಂಗಳೂರಿನಲ್ಲಿ ಕಾಂ. ಎಸ್. ಸೂರ್ಯನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರಂಭದಲ್ಲಿ ಅಗಲಿದ ಕಾರ್ಮಿಕ ಮುಖಂಡರಾದ ಕಾಂ. ಕೆ. ಎಸ್. ವಾಸನ್, ಕಾಂ. ಎಸ್. ಎಸ್. ಮಿರಜ್‌ಕರ್, ಕಾಂ. ಐ. ಮರಿದಾಸ್ ಮತ್ತು ರೈತ ಮುಖಂಡ ಕಾಂ. ಬಿ. ಎನ್. ಅಪ್ಪಣ್ಣ ಹೆಗ್ಗಡೆಯವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯಗಳನ್ನು ಸಭೆಯು ಎದ್ದು ನಿಂತು ಒಂದು ನಿಮಿಷ ಮೌನಾಚರಣೆಯ ಮೂಲಕ ಅಂಗೀಕರಿಸಿತು.

ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಸಭೆಗೆ ವರದಿಯನ್ನರ್ಪಿಸುತ್ತಾ ದೇಶ ಮತ್ತು ರಾಜ್ಯದಲ್ಲಿ ಆಗಿರುವ ರಾಜಕೀಯ ಬದಲಾವಣೆಯನ್ನು ಪ್ರಸ್ತಾಪಿಸಿ ತ್ರಿಪುರ, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಜನವರಿಯಲ್ಲಿ ನಡೆದ ಚುನಾವಣೆಗಳಲ್ಲಿ ಸರ್ವಾಧಿಕಾರಿ ಶಕ್ತಿಗಳನ್ನು ಪ್ರತಿನಿಧಿಸುವ ಇಂದಿರಾಗಾಂಧಿಯವರ ಕಾಂಗ್ರೆಸ್ (ಐ) ಪಕ್ಷವನ್ನು ಸೋಲಿಸಿ ಎಡ ಮತ್ತು ಪ್ರಜಾಪ್ರಭುತ್ವ ರಂಗಗಳನ್ನು ಗೆಲ್ಲಿಸಿದ ಜನತೆಗೆ ಕ್ರಾಂತಿಕಾರಿ ಶುಭಾಶಯಗಳನ್ನು ಅರ್ಪಿಸೋಣ ಎಂದರು. ಕಳೆದ ಸಭೆಯನಂತರ ಈವರೆಗಿನ ನಮ್ಮ ರಾಜ್ಯದ ಕಾರ್ಮಿಕ ಚಳುವಳಿಯ ಬೆಳವಣಿಗೆಗಳನ್ನು ಅವಲೋಕಿಸುತ್ತಾ ಬಹುರಾಷ್ಟ್ರೀಯ ಕಂಪನಿಯ ವಿರುದ್ಧ 87 ದಿವಸಗಳ ಮುಷ್ಕರವನ್ನು ನಡೆಸಿದ ಬೆಂಗಳೂರಿನ ಮೈಕೋ ಕಾರ್ಮಿಕರನ್ನು, ಮಾಲೀಕರು ಅಕ್ರಮವಾಗಿ, ಅನ್ಯಾಯವಾಗಿ ಹೇರಿದ 'ಬೀಗ ಮುದ್ರೆ' (ಲಾಕೌಟು)ಯ ವಿರುದ್ಧ ದೀರ್ಘಕಾಲ ಸೆಣಸಿ ಜಯಪಡೆದ ದಾಂಡೇಲಿಯ ಎಲೆಕ್ಟ್ರೋ ಕಾರ್ಮಿಕರನ್ನು, 22-11-79ರಿಂದ ಎಲ್ಲಾ ಅಡೆತಡೆಗಳನ್ನು ಎದುರಿಸಿ ಮುಷ್ಕರ ನಡೆಸುತ್ತಿರುವ ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲಿನ ವೀರ ಕಾರ್ಮಿಕರನ್ನು ಅವರು ಶ್ಲಾಘಿಸಿದರು.

"ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ಪಕ್ಷದ ವಿಜಯ ಕಾರ್ಮಿಕ ವರ್ಗಕ್ಕೆ ಒಂದು ಅಪಾಯಕಾರಿ ಬೆಳವಣಿಗೆಯಾಗಿದೆ. ತುರ್ತುಪರಿಸ್ಥಿತಿಯನ್ನು ಹೇರಿ, ಮೂಲಭೂತ ಹಕ್ಕುಗಳನ್ನು ಕಸಿದುಕೊಂಡು, ಮುಷ್ಕರಗಳನ್ನು ನಿಷೇಧಿಸಿ, ಕಾರ್ಮಿಕ-ನೌಕರರನ್ನು ಬಂಡವಾಳಗಾರರಿಗೆ ಒಪ್ಪಿಸಿದ, ಸಿ.ಐ.ಟಿ.ಯು. ಮುಖಂಡರನ್ನು ಜೈಲಿಗೆ ಹಾಕಿದ ಪಕ್ಷವು ಇಂದು ಮತ್ತೆ ಅಧಿಕಾರಕ್ಕೆ ಬಂದಿದೆ. ಪ್ರಜಾಪ್ರಭುತ್ವವು ಅಪಾಯದಲ್ಲಿದೆ. ದುಡಿಯುವ ಜನಸಮುದಾಯದ ಹಿತಕ್ಕೆ ಧಕ್ಕೆಯೊದಗಿದೆ. ಈ ಪಕ್ಷವು ಲೋಕಸಭೆಯಲ್ಲಿ ಶೇ. 70 ರಷ್ಟು ಸ್ಥಾನಗಳನ್ನು ಗಳಿಸಿದ್ದರೂ ಶೇ. 42 ರಷ್ಟು ಮತಗಳನ್ನು ಮಾತ್ರ ಪಡೆದಿದೆ ಎಂಬುದು ಗಮನಾರ್ಹ. ಬಹುಮತದ ಮತದಾರರು, ಇಂದಿರಾ ಗಾಂಧಿಯ ವಿರುದ್ಧ ಮತನೀಡಿದ್ದಾರೆ ಎಂಬುದು ಸುಸ್ಪಷ್ಟ" ಎಂದು ಅವರು ಹೇಳಿದರು.

"ಬೆಲೆ ಏರಿಕೆ, ನಿರುದ್ಯೋಗಗಳ ವಿರುದ್ಧ, ಕೃಷಿಕಾರ್ಮಿಕರ ಮತ್ತು ರೈತರ ಬೇಡಿಕೆಗಳಿಗಾಗಿ ಒಂದು ವಿಶಾಲರಂಗವನ್ನು ರಚಿಸಬೇಕಾಗಿದೆ. ತ್ರಿಪುರ, ಪಶ್ಚಿಮ ಬಂಗಾಳಗಳ ಎಡರಂಗ ಸರ್ಕಾರಗಳನ್ನೂ ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರ್ಕಾರವನ್ನು ರಕ್ಷಿಸಿ ಉಳಿಸಬೇಕಾಗಿದೆ. ಕಾರ್ಮಿಕ ಸಂಘಗಳ ಐಕ್ಯತೆಯು ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಿ, ಬಲಪಡಿಸಲು ಆಧಾರವಾಗಬೇಕಾಗಿದೆ. ಈ ರೀತಿಯಲ್ಲಿ ಮಾತ್ರ ಕಾರ್ಮಿಕ ವರ್ಗ ಸರ್ವಾಧಿಕಾರಿ ಶಕ್ತಿ

[ಕಡೆಯ ಪುಟ ನೋಡಿ]

ರೈತಸಂಘದ ಸದಸ್ಯತ್ವ ಸಪ್ತಾಹ

ತಾ. 3-3-1980 ರಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಪ್ರಾಂತ ರೈತಸಂಘದ ಕಾರ್ಯಕಾರಿ ಸಮಿತಿ ಸಭೆಯ ಕಾರ್ಯಕಲಾಪಗಳು ಮತ್ತು ತೀರ್ಮಾನಗಳು.

ತೀರ್ಥಹಳ್ಳಿ ತಾಲ್ಲೂಕಿನ ರೈತ ಮುಖಂಡರಾದ ಕಾಂ. ಅಪ್ಪಣ್ಣಹೆಗ್ಗಡೆಯವರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು.

ಜಿಲ್ಲಾವಾರು ವರದಿಗಳನ್ನು ಚರ್ಚೆ ಮಾಡಿ ರೈತರ ಸಂಘಟನೆಯನ್ನ ಪ್ರಬಲವಾಗಿ ಬೆಳೆಸಲು ಆಯಾ ಜಿಲ್ಲೆಯ ರೈತರ ಸಮಸ್ಯೆಗಳನ್ನ ತೆಗೆದುಕೊಂಡು ಪರಿಹಾರಕ್ಕಾಗಿ ಮಾರ್ಗದರ್ಶನ ಮಾಡುವದಲ್ಲದೆ ಸಂದರ್ಭಾನುಸಾರ ಹೋರಾಟಗಳನ್ನು ಜರುಗಿಸಬೇಕೆಂದೂ ತೀರ್ಮಾನಿಸಲಾಯಿತು.

ಮಾರ್ಚಿ 10ನೇ ತಾರೀಖಿನಿಂದ 25ನೇ ತಾರೀಖಿನವರೆಗೆ 15 ದಿವಸಗಳ ಕಾಲ ಸದಸ್ಯತ್ವ ಕೂಡಿಸಬೇಕೆಂದೂ, ಆದಷ್ಟೂ ಗ್ರಾಮಗಳಲ್ಲಿ ಇದನ್ನು ಒಂದು ಚಳುವಳಿ ರೂಪದಲ್ಲಿ ನಡೆಸಿ, ಪೂರ್ಣಗೊಂಡ ಸದಸ್ಯರ ಶುಲ್ಕದ ಹಣ ಮತ್ತು ರಶೀದಿ ಪುಸ್ತಕಗಳನ್ನು ಮಾರ್ಚಿ 28 ರೊಳಗೆ ರೈತಸಂಘದ ರಾಜ್ಯಸಮಿತಿ ಕಛೇರಿಗೆ ತಲುಪಿಸಬೇಕು.

ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾಯರ ಸಲಹೆ ಮೇರೆಗೆ ತಾ. 15-3-80 ರಂದು ತೀರ್ಥಹಳ್ಳಿಯಲ್ಲಿ ತಾಲ್ಲೂಕು ರೈತಸಂಘದ ಸಭೆಸೇರಿಸಿ ಕೌನ್ಸಿಲ್ ಕ್ಲಾಸನ್ನ ಶಿವಮೊಗ್ಗ ಜಿಲ್ಲೆಯಲ್ಲಿ ನಡೆಸಲು ವ್ಯವಸ್ಥೆ ಮಾಡತಕ್ಕದ್ದೆಂದೂ, 15ರ ಸಭೆಗೆ ಅಧ್ಯಕ್ಷರೂ ಪ್ರಧಾನ ಕಾರ್ಯದರ್ಶಿಯವರೂ ಮತ್ತು ಕಾಂ. ಎಮ್. ಕೆ. ಭಟ್ಟರವರೂ ಹೋಗಿ ಭಾಗವಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಮಾರ್ಚ 14ರಂದು ಪ್ರಾಂತದ ರೈತ ಪ್ರತಿನಿಧಿಗಳು ಮಧ್ಯಾಹ್ನ 2-30 ಕ್ಕೆ ಚಿಕ್ಕಲಾಲ್‌ಬಾಗಿನಿಂದ ಮೆರವಣಿಗೆಯಲ್ಲಿ ಹೊರಟು ವಿಧಾನ ಸೌಧಕ್ಕೆ ಹೋಗಿ ಬಹುಕಾಲದಿಂದ ಮುಂದುವರಿದುಕೊಂಡು ಬಂದಿರುವ ತಾತಗುಣಿ ಎಸ್ಟೇಟಿನ ಹರಿಜನ ಕೆಲಸಗಾರರ ಹೋರಾಟದಲ್ಲಿ ಸರ್ಕಾರ ಮಧ್ಯೆ ಪ್ರವೇಶಮಾಡಿ ಬಗೆಹರಿಸಬೇಕೆಂದು ಒತ್ತಾಯಮಾಡಿ ಮನವಿಪತ್ರ ಸಲ್ಲಿಸತಕ್ಕದ್ದೆಂದು ತೀರ್ಮಾನಿಸಲಾಯಿತು. ದೇಶದ 9ರಾಜ್ಯಗಳಲ್ಲಿನ ವಿಧಾನಸಭೆಗಳನ್ನು ಹಠಾತ್ತಾಗಿ ವಿಸರ್ಜಿಸಿರುವ ಕೇಂದ್ರ ಸರ್ಕಾರದ ನೀತಿಯನ್ನು ಸಭೆ ಖಂಡಿಸಿತು.

ಗ್ರಾಮಾಂತರ ಪ್ರದೇಶಗಳಲ್ಲಿ ನಿತ್ಯ ಬಳಕೆ ವಸ್ತುಗಳು ಸೀಮೆಎಣ್ಣೆ ಮತ್ತು ಸಕ್ಕರೆ ರೈತರಿಗೆ ಸಿಕ್ಕದಂತಾಗಿದೆ. ಇದು ದೊರಕುವ ವ್ಯವಸ್ಥೆಯಾಗಬೇಕು. ಮಿತಿಮೀರಿ ಏರುತ್ತಿರುವ ಅಡಿಗೆ ಎಣ್ಣೆ, ಬೇಳೆ ವಗೈರೆ ಅತಿ ಅವಶ್ಯಕ ವಸ್ತುಗಳ ಬೆಲೆ ಬಡರೈತ ಹಾಗೂ ಕೃಷಿಕಾರ್ಮಿಕರಿಗೆ ಎಟಕುವಂತೆ ತಗ್ಗಿಸಬೇಕು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈವರೆಗೆ ಕಟ್ಟಿಗೆ ಕಡಿಯಲು ರೈತರಿಗೆ ಸಿಕ್ಕುತ್ತಿದ್ದ ಲೈಸೆನ್ಸ್ ರದ್ದುಮಾಡಿ ಅರಣ್ಯ ಇಲಾಖೆಯವರೇ ಡಿಪೋಗಳ ಮೂಲಕ ಇದನ್ನು ನಡೆಸುತ್ತಿರುವುದು ರೈತರನ್ನೂ ಬಳಕೆದಾರರನ್ನೂ ಅತೀವ ಕಷ್ಟಕ್ಕೀಡುಮಾಡಿದೆಯಾದ್ದರಿಂದ, ಈ ಬದಲಾವಣೆಯನ್ನು ಈ ಸಭೆ ಖಂಡಿಸುತ್ತದೆ. ಹಿಂದೆ ಇದ್ದಂತೆಯೇ ಮಾರ್ಪಾಡು ಮಾಡಬೇಕೆಂದು ಈ ಸಭೆ ಸರ್ಕಾರವನ್ನು ಒತ್ತಾಯಪಡಿಸುತ್ತದೆ.

ಭೂ ನ್ಯಾಯ ಮಂಡಳಿಗಳಲ್ಲಿ ರೈತ ಸಂಘದ ಪ್ರಾತಿನಿಧ್ಯವಿರಬೇಕೆಂದು ಈ ಸಭೆ ಸರ್ಕಾರವನ್ನು ಒತ್ತಾಯಪಡಿಸುತ್ತದೆ.

ದಾಂಡೇಲಿಯಲ್ಲಿ ಮುಂದುವರಿಯುತ್ತಿರುವ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲಿನ ಕಾರ್ಮಿಕರ ಹೋರಾಟಕ್ಕೆ ಈ ಸಭೆ ಬೆಂಬಲ ಕೊಡುತ್ತದೆ. ಸರ್ಕಾರ ಕೂಡಲೇ ಮಧ್ಯ ಪ್ರವೇಶ ಮಾಡಿ ಇದನ್ನು ಇತ್ಯರ್ಥಮಾಡಬೇಕಾಗಿ ಒತ್ತಾಯಮಾಡುತ್ತದೆ.

ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ಬೆಂಗಳೂರು ಆವೃತ್ತಿಯನ್ನು ಮುಚ್ಚಿ 250 ನೌಕರರ ಕುಟುಂಬಗಳನ್ನು ನಿರುದ್ಯೋಗಕ್ಕೆ ತಳ್ಳಿರುವ ಆಡಳಿತ ವರ್ಗವನ್ನು ಕರ್ನಾಟಕ ಪ್ರಾಂತ ರೈತಸಂಘದ ಕಾರ್ಯಕಾರಿ ಸಮಿತಿ ಖಂಡಿಸುತ್ತದೆ. ಪತ್ರಿಕೆಯನ್ನು ಮತ್ತೆ ಪ್ರಾರಂಭಿಸಿ, ನೌಕರರಿಗೆ ನ್ಯಾಯ ದೊರಕಿಸಿಕೊಡಲು, ಸರ್ಕಾರ ಮಧ್ಯೆಪ್ರವೇಶಮಾಡಬೇಕೆಂದು ಈ ಸಮಿತಿಯು ಒತ್ತಾಯಪಡಿಸುತ್ತದೆ.

ಸ್ಟೈಫಂಡರೀ ಪದವೀಧರರ ಹೋರಾಟಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಪೂರ್ಣ ಬೆಂಬಲಕೊಡುತ್ತದೆ. ಸರ್ಕಾರ ಇವರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಈ ಸಭೆ ಒತ್ತಾಯಪಡಿಸುತ್ತದೆ.

ಕೇಂದ್ರ ಸರ್ಕಾರ ಪುರಸಭೆಯ ಮೂಲಕ ಬಡವರಿಗೆ ಮನೆಕಟ್ಟಲು ಒದಗಿಸಿರುವ ಸಾಲದ ಹಣವನ್ನು ಕೃಷಿ ಕಾರ್ಮಿಕರು ಮತ್ತು ಇತರೆ ಕಾರ್ಮಿಕ ವರ್ಗಕ್ಕೇ ಕೊಡಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ.

○

ರೈತರ ಸಂಘಟನೆಗೆ ಕರೆ

ದ. ಕ. ಜಿಲ್ಲೆ ಬಂಟ್ವಾಳ ತಾಲ್ಲೂಕು ರೈತಸಂಘದ ವಿಸ್ತೃತ ಸಭೆಯು ತಾ. 18-2-80 ನೇ ಸೋಮವಾರ ಬಿ. ರುಕ್ಮಯ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸಂಘದ ಆಫೀಸಿನಲ್ಲಿ ಜರಗಿತು. ಬಿ ನಾರಾಯಣರವರು ಸಭೆಯನ್ನು ಕರೆದ ಉದ್ದೇಶವನ್ನು ವಿವರಿಸಿದರು. ಬಳಿಕ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನ್ಯಾಕ್ ಇವರು ಮಾತನಾಡುತ್ತಾ, ರೈತರ ಸಂಘಟನೆಯನ್ನು ಬಲಪಡಿಸಬೇಕೆಂದೂ, ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಸಂಘಕ್ಕೆ ಸದಸ್ಯತನವನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಬೇಕೆಂದು ವಿನಂತಿಸಿದರು.

ಶ್ರೀ ಬಿ. ಹೆಚ್. ಬಂಗೇರ, ಶ್ರೀಕೇಶ್ ಮತ್ತು ಬಿ. ವಾಸುಗಟ್ಟಿ ಮೊದಲಾದವರು ರೈತಸಂಘಟನೆಯನ್ನು ಬೆಳೆಸುವಲ್ಲಿ ಸಲಹೆ ಸೂಚನೆಗಳನ್ನಿತ್ತು ಮಾತನಾಡಿದರು. ಅನಂತರ ಪ್ರಾಂತ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಸಮಿತಿ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ ಪ. ಬಂಗಾಳ, ತ್ರಿಪುರ, ಮತ್ತು ಕೇರಳ ರಾಜ್ಯಗಳಲ್ಲಿ ಕಿಸಾನ್ ಸಂಘಟನೆಯು ಬೆಳೆದಿರುವ ಬಗ್ಗೆ ವಿವರಣೆಯನ್ನಿತ್ತರು.

ಸಭೆಯು ನಿರ್ಣಯವನ್ನು ಅಂಗೀಕರಿಸಿ ಬೇಸಾಯಗಾರ ರೈತನಿಗೆ ತಮ್ಮ ಪಂಪುಸೆಟ್ಟುಗಳಿಗೆ ಕನಿಷ್ಟ ಪಕ್ಷ 80 ಲೀಟರ್ ಸೀಮೆಎಣ್ಣೆ ಕೂಡಲೇ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿತು.

ಕೇಂದ್ರ ಸರಕಾರವು ಜನತೆಯಿಂದ ಆಯ್ಕೆಯಾದ 9 ರಾಜ್ಯ ಸರಕಾರಗಳನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತವನ್ನು ತಂದ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಈ ಸಭೆಯು ತೀವ್ರವಾಗಿ ಖಂಡಿಸಿತು. ●

ಮೈಸೂರಿನಲ್ಲಿ ರೈಲ್ವೆ ಕಾರ್ಮಿಕರ ಸತ್ಯಾಗ್ರಹ

ಖಲಾಸಿಗಳ ನೇಮಕ, ಖಲಾಸಿಗಳ ನೇಮಕಾತಿಯಲ್ಲಿ ಕಾರ್ಮಿಕರ ಮಕ್ಕಳಿಗೆ ಆದ್ಯತೆ, ರೈಲ್ವೆ ನೌಕರರಿಗೆ ಶೀಘ್ರ ಬೋನಸ್ ಪಾವತಿ, ಕಡ್ಡಾಯವಾಗಿ ನಿವೃತ್ತಿ ಮಾಡಲ್ಪಟ್ಟ ಕಾಂ. ವೆಂಕಟರಮಣ ಮತ್ತು ರಂಗಸ್ವಾಮಿಯವರ ಪುನರ್ ನೇಮಕಾತಿ, ಕಾರ್ಮಿಕರಿಗೆ ನಗರ ಭತ್ಯ ಮುಂತಾದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕಾಂ. ವೆಂಕಟೇಶ್, ಬಾಲಸುಂದರಂ, ಕೆ. ಈಶ್ವರರಾವ್, ಎನ್. ಲಕ್ಕಯ್ಯ ಅವರುಗಳು ಫೆ. 12 ರಂದು 24 ಗಂಟೆಗಳ ಉಪವಾಸ ಸತ್ಯಾಗ್ರಹ ಆಚರಿಸಿದರು.

ಸಿ. ಐ. ಟಿ. ಯು. ಮುಖಂಡ ಕಾಂ. ಎಂ. ಎನ್. ಉಗ್ರಪ್ಪನವರು ಸತ್ಯಾಗ್ರಹವನ್ನು ಉದ್ಘಾಟಿಸಿದರು. ಸದರನ್ ರೈಲ್ವೆ ಮಜದೂರ್ ಸಮಿತಿಯ ಆಶ್ರಯದಲ್ಲಿ ಸತ್ಯಾಗ್ರಹ ಜರುಗಿತು. ○

ಕುತೂಹಲ ಕೆರಳಿಸಿದ ಕಾರ್ಮಿಕ ಸಂಘದ ಚುನಾವಣೆ

ಚಿತ್ರದುರ್ಗ ಜಿಲ್ಲೆಯ ಅವಳಿ ಕಾರ್ಮಿಕ ನಗರಗಳಲ್ಲಿ ಒಂದಾದ ಹರಿಹರದ ಕಿರ್ಲೋಸ್ಕರ್ ಕಾರ್ಖಾನೆ ಕೆಲಸಗಾರರ ಸಂಘದ ಚುನಾವಣೆ ತಾ॥ 28-2-80 ರಂದು ನಡೆಯಿತು. ಎ.ಐ.ಟಿ.ಯು.ಸಿ. ಮತ್ತು ಸಿ.ಐ.ಟಿ.ಯು ಮಧ್ಯೆ ನೇರ ಸ್ಪರ್ಧೆ ಇದ್ದ ಈ ಚುನಾವಣೆಯಲ್ಲಿ ಎಡ ಐಕ್ಯತೆಯನ್ನು ತಂದು ಸರ್ವಾನುಮತದ ಆಯ್ಕೆ ನಡೆದು ನಂತರ ಚುನಾವಣೆ ನಡೆಸಬಹುದೆಂದು ಸಿ.ಐ.ಟಿ.ಯು ನಾಯಕತ್ವ ಮಾಡಿದ ಪ್ರಯತ್ನಗಳು ವಿಫಲವಾದವು.

ಹರಿಹರ ಕಿರ್ಲೋಸ್ಕರ್ ಕಾರ್ಖಾನೆ ಕೆಲಸಗಾರರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಅದರ 25 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಚುನಾವಣೆ ನಡೆದಿರುವುದು. ವಿವಿಧ ಕಾರ್ಮಿಕ ಸಂಘಗಳು, ರಾಜಕೀಯ ಪಕ್ಷಗಳು ಹಾಗೂ ಜನ ಸಾಮಾನ್ಯರ ಮಧ್ಯೆ ಚುನಾವಣೆ ಅಪಾರ ಆಸಕ್ತಿಯನ್ನು ಕೆರಳಿಸಿತ್ತು.

ಶೇಕಡ 76ರಷ್ಟು ಮತದಾನ ನಡೆದು ಆ ದಿನ ರಾತ್ರಿಯೇ ಎಣಿಕೆ ನಡೆದಾಗ ಸಿ.ಐ.ಟಿ.ಯು.ನ ಎಲ್ಲಾ ಅಭ್ಯರ್ಥಿಗಳು 4/5 ಭಾಗದಷ್ಟು ಬಹುಮತ ಪಡೆದಿರುವುದು ಸ್ಪಷ್ಟವಾಯಿತು.

ಫಲಿತಾಂಶದ ವಿವರ ಈ ರೀತಿ ಇದೆ :

1)	ಅಧ್ಯಕ್ಷ :	
	ಒಟ್ಟು ಚಲಾವಣೆಯಾದ ಮತಗಳು	1555
	ಕಾಂ. ಆರ್. ಜಿ. ಸ್ಥಳೇಕರ್	1224
	ಕಾಂ. ಪಂಪಾಪತಿ	310
	ವ್ಯರ್ಥವಾದ ಮತಗಳು	21
2)	ಉಪಾಧ್ಯಕ್ಷ :	
	ಒಟ್ಟು ಚಲಾವಣೆಯಾದ ಮತಗಳು	1554
	ಕಾಂ. ವಿ.ಜಿ.ಕೆ. ನಾಯರ್	1211
	ಕಾಂ. ಆನಂದತೀರ್ಥ	321
	ವ್ಯರ್ಥವಾದ ಮತಗಳು	22
3)	ಪ್ರಧಾನ ಕಾರ್ಯದರ್ಶಿ :	
	ಒಟ್ಟು ಚಲಾವಣೆಯಾದ ಮತಗಳು	1554
	ಎನ್.ಜಿ. ಪಠಾಣ	1235
	ಹೆಚ್.ಟಿ. ತುಕಾರಾಮ್ ಸಾ	305
	ವ್ಯರ್ಥವಾದ ಮತಗಳು	14
4)	ಉಪಕಾರ್ಯದರ್ಶಿ :	
	ಚಲಾವಣೆಯಾದ ಮತಗಳು	1554
	ಹೆಚ್. ಬಸಪ್ಪ	1118
	ಎಂ. ಅಬ್ದುಲ್ ಖುದ್ದೂಸ್	410
	ವ್ಯರ್ಥವಾದ ಮತಗಳು	26
5)	ಖಜಾಂಚಿ :	
	ಚಲಾವಣೆಯಾದ ಮತಗಳು	1552
	ಕಾಂ. ಎಸ್. ಪಿ. ಭಾಸ್ಕರ್	1239
	ಬಿ. ಹೊನ್ನಪ್ಪ	295
	ವ್ಯರ್ಥವಾದ ಮತಗಳು	18

ಕಾರ್ಯಕಾರಿ ಸಮಿತಿಗೆ ಕೆಳಕಂಡವರು ಚುನಾಯಿತರಾಗಿದ್ದಾರೆ :

ಕ್ಯಾಂಟೀನ್ : ಎಸ್.ವಿ. ಹನುಮಂತಪ್ಪ. 87 ಮತಗಳ ಪೈಕಿ 57 ಮತಗಳು.
ಶಾಪ್ ನಂ. 1 : ಆರ್. ಬಿ. ಅಂಗಡಿ. 110 ಮತಗಳ ಪೈಕಿ 105 ಮತಗಳು.
ಫ್ಯಾಟ್ರಿನ್ ಷಾಪ್ : ಬಿ. ವಿ. ಕಾಡಾರ್. 84 ಮತಗಳ ಪೈಕಿ 56 ಮತಗಳು,
ಕ್ರೈನ್ ಡ್ರೈವರ್ಸ್ : ವೈ. ಪತಿಯಪ್ಪ. 117 ಮತಗಳ ಪೈಕಿ 90 ಮತಗಳು.
ಷಾಪ್ ನಂ. 2 : (ಎರಡು ಸ್ಥಾನಗಳು) ಎ. ಎನ್. ಮೋಹಿತೆ, ಎನ್. ಎಂ. ಆರೇರ್ 392 ಮತಗಳ ಪೈಕಿ ಕ್ರಮವಾಗಿ 181, 169 ಮತಗಳು.
ಎಮರಿ ಸೆಕ್ಷನ್ : (ಎರಡು ಸ್ಥಾನಗಳು) ಡಿ. ಗುಡ್ಡಪ್ಪ, ನಜೀರ್ ಅಹ್ಮದ್ 361 ಮತಗಳ ಪೈಕಿ ಕ್ರಮವಾಗಿ 164, 161 ಮತಗಳು.
ಕೋರ್ ಸೆಕ್ಷನ್ : (ಎರಡು ಸ್ಥಾನಗಳು) ಎ. ಪದ್ಮರಾಜ್, ಐ. ಅವರೇಶ್ವರ್ 369 ಮತಗಳ ಪೈಕಿ ಕ್ರಮವಾಗಿ 173, 170 ಮತಗಳು.

ಚುನಾವಣೆಗೆ ಮೊದಲೇ ಐದು ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಒಬ್ಬ ಪಕ್ಷೇತರರೂ ಇದ್ದಾರೆ.

ಚುನಾವಣೆಗಳಲ್ಲಿ ಸಿ ಐ.ಟಿ.ಯು. ನಾಯಕತ್ವ ಜಯಗಳಿಸಿದ್ದರೂ, ಕಾರ್ಮಿಕರ ಸಮಸ್ಯೆಗಳ ಬಗ್ಗೆ ಐಕ್ಯ ಹೋರಾಟ ನಡೆಸಲು, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಒಗ್ಗಟ್ಟನ್ನು ಮುಂದುವರಿಸಲು ತಾವು ಶ್ರಮಿಸುವುದಾಗಿ ನೂತನ ಪದಾಧಿಕಾರಿಗಳು ತಿಳಿಸಿದ್ದಾರೆ. ●

ನಾಳಿನ
ಏಳಿಗೆಗಾಗಿ
ಪ್ರತಿಜ್ಞೆ ಕೈಗೊಳ್ಳೋಣ

* ಪ್ರಜಾಪ್ರಭುತ್ವವನ್ನು ರಕ್ಷಿಸಿ, ಅದರ ದಿಗಂತಗಳನ್ನು ವಿಸ್ತರಿಸೋಣ.
* ಕೋಮು ಸೌಹಾರ್ದವನ್ನು ಕಾಯ್ದುಕೊಂಡು, ರಾಷ್ಟ್ರೀಯ ಐಕ್ಯತೆಯನ್ನು ದೃಢಪಡಿಸೋಣ.
* ಶ್ರಮಜೀವಿಗಳ ಹಕ್ಕುಗಳ ಸ್ಥಾಪನೆ ಮತ್ತು ಅವರ ಜೀವನಮಟ್ಟದ ಸುಧಾರಣೆಗಾಗಿ ಅವರು ನಡೆಸುವ ಹೋರಾಟಗಳನ್ನು ಬಲಪಡಿಸೋಣ.
* ನಮ್ಮ ಪಂಚಾಯತಿಗಳ ಮೂಲಕ ಮೂಲೆಮೂಲೆಯ ಹಳ್ಳಿಗಳಿಗೂ ಪ್ರಜಾಪ್ರಭುತ್ವವನ್ನು ವಿಸ್ತರಿಸೋಣ.
* ನಮ್ಮ ಶಿಕ್ಷಣ ವ್ಯವಸ್ಥೆಯ ವಿಷಣ್ಣತೆಯನ್ನು ತೊಡೆದು ಹಾಕೋಣ ಮತ್ತು ಈ ವಿಚಾರದಲ್ಲಿ ಶ್ರಮಜೀವಿಗಳ ಅಗತ್ಯವನ್ನು ಸ್ಥಾಪಿಸಲು ಸಹಾಯ ಮಾಡೋಣ.
* ರೈತ ಜನಾಂಗದ, ಅದರಲ್ಲೂ ಕೃಷಿಕಾರ್ಮಿಕರ, ಗೇಣಿದಾರರ ಮತ್ತು ಸಣ್ಣರೈತರ ಹಿತಾಸಕ್ತಿಗಳನ್ನು ಕಾಪಾಡೋಣ ಮತ್ತು ಕೃಷಿ ಅಭಿವೃದ್ಧಿಯ ಮತ್ತು ಭೂಸುಧಾರಣೆಗಳ ಗತಿಯನ್ನು ಶೀಘ್ರಗೊಳಿಸಲು ಸಹಾಯ ಮಾಡೋಣ.
* ರಾಜ್ಯದ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸೋಣ.
* ಸರ್ಕಾರ ಮತ್ತು ಜನತೆಯ ನಡುವಿನ ಸಹಕಾರವನ್ನು ಬಲಪಡಿಸೋಣ.
* ಪ್ರತಿಗಾಮಿ ಶಕ್ತಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಎಚ್ಚರಿಕೆ ವಹಿಸೋಣ.

ಪಶ್ಚಿಮ ಬಂಗಾಳದ ಸರ್ಕಾರ

ಕೇಂದ್ರ-ರಾಜ್ಯ ಸಂಬಂಧಗಳ ಮರು ಪರಿಶೀಲನೆ

—ರಾಂ

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕೇಂದ್ರ-ರಾಜ್ಯ ಸಂಬಂಧಗಳ ಮರುಪರಿಶೀಲನೆ ಆಗಬೇಕು. ಭಾರತದ ಒಕ್ಕೂಟದ ತತ್ವಕ್ಕನುಗುಣವಾಗಿ ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಅಧಿಕಾರಗಳನ್ನೂ ಸ್ವಾಯತ್ತತೆಯನ್ನೂ ಕೊಡಬೇಕು. ಕೇಂದ್ರ ಸರಕಾರವು ಈ ಕೂಡಲೇ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಮತ್ತು ಅಧಿಕೃತ ರಾಜಕೀಯ ಪ್ರತಿನಿಧಿಗಳ ಅಖಿಲ ಭಾರತ ಮಟ್ಟದ ಸಮ್ಮೇಳನ ಒಂದನ್ನು ಕರೆಯಬೇಕು ಎಂದು ಕಾಂ. ಸುಶೀಲಾಗೋಪಾಲನ್ ಲೋಕಸಭೆಯಲ್ಲಿ ಕಳೆದ ಫೆಬ್ರುವರಿ 5ರಂದು ಒಂದು ಮಹತ್ವದ ನಿರ್ಣಯವನ್ನು ಮಂಡಿಸಿದರು. ಕೇಂದ್ರದಲ್ಲಿನ ಇಂದಿರಾಗಾಂಧಿಯ ಹೊಸ ಸರಕಾರ ಅಷ್ಟರಲ್ಲಿಯೇ ಕಾಂಗ್ರೆಸ್ (ಐ) ಅಧಿಕಾರದಲ್ಲಿ ಇಲ್ಲದ ಹೆಚ್ಚಿನ ರಾಜ್ಯ ಸರಕಾರಗಳನ್ನು ಉರುಳಿಸಲು ಭರದಿಂದ ಸಿದ್ಧತೆ ನಡೆಸುತ್ತಿತ್ತು.

ಮುಂದೆ, ಕಾಂಗ್ರೆಸ್ (ಐ) ಹೊರತಾದ ರಾಜ್ಯ ವಿಧಾನಸಭೆಗಳನ್ನು ವಿಸರ್ಜಿಸುವ ವಿರುದ್ಧ ವಿರೋಧ ಪಕ್ಷಗಳ ರಾಜ್ಯ ಸರಕಾರಗಳ ಮತ್ತು ಸಂವಿಧಾನ ತಜ್ಞರ ಅಭಿಪ್ರಾಯಗಳನ್ನೆಲ್ಲಾ ಧಿಕ್ಕರಿಸಿ, ಫೆಬ್ರುವರಿ 17ರಂದು ನಡುರಾತ್ರಿಯಲ್ಲಿ ಕೇಂದ್ರ ಮಂತ್ರಿ ಮಂಡಳಿಯ ಸಭೆ ನಡೆಸಿ ಬೆಳಗಾಗುವುದರೊಳಗೆ ಮಹಾರಾಷ್ಟ್ರ, ತಮಿಳುನಾಡು, ಗುಜರಾತ್, ರಾಜಸ್ಥಾನ, ಉ. ಪ್ರದೇಶ, ಪಂಜಾಬ್, ಮ. ಪ್ರದೇಶ, ಒರಿಸ್ಸಾ ಮತ್ತು ಬಿಹಾರ್ ಸೇರಿ ಒಂಭತ್ತು ರಾಜ್ಯ ಸರಕಾರಗಳನ್ನು ವಜಾಗೊಳಿಸಲಾಯಿತು!

ಈ ಸಂದರ್ಭದಲ್ಲಿ ಕೇಂದ್ರ-ರಾಜ್ಯ ಸಂಬಂಧಗಳ ಮರು ಪರಿಶೀಲನೆ ಆಗಬೇಕೆಂಬ ಕೇಳಿಕೆಯು ತುಂಬಾ ಮಹತ್ವದ್ದಾಗಿದೆ. ಪ. ಬಂಗಾಳ, ತ್ರಿಪುರಾ ಮತ್ತು ಕೇರಳ ರಾಜ್ಯಗಳಲ್ಲಿ ಮಾತ್ರ ಈಗ ಕಾಂಗ್ರೆಸ್ (ಐ) ಹೊರತಾದ ಎಡ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳ ಸಂಯುಕ್ತ ರಂಗದ ಸರಕಾರಗಳಿವೆ. ಆದುದರಿಂದ, ಕೇಂದ್ರ-ರಾಜ್ಯ ಸಂಬಂಧಗಳ ಮರುಪರಿಶೀಲನೆಗೆ ಜನಾಭಿಪ್ರಾಯಗಳಿಸುವುದು, ಕೇಂದ್ರವನ್ನು ಒತ್ತಾಯಿಸುವುದು ಎಲ್ಲಾ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಕಾಂ. ಸುಶೀಲಾಗೋಪಾಲನ್ ಅವರು ಲೋಕಸಭೆಯಲ್ಲಿ ಈ ಕುರಿತು ಮಾಡಿದ ಭಾಷಣದ ಆಧಾರದಲ್ಲಿ ಕೆಲವು ಮುಖ್ಯ ವಿಷಯಗಳನ್ನು ಇಲ್ಲಿ ತಿಳಿಸಲಾಗಿದೆ.

ವೈವಿಧ್ಯತೆಯಲ್ಲಿ ಒಕ್ಕಟ್ಟು :

ದೇಶದ ಒಕ್ಕಟ್ಟು ಮತ್ತು ಐಕ್ಯತೆಯ ದೃಷ್ಟಿಯಿಂದ ಕೇಂದ್ರ-ರಾಜ್ಯ ಸಂಬಂಧಗಳು ಬಹಳ ಮುಖ್ಯವಾಗಿವೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತರಾಗಲು ಭಾರತದಲ್ಲಿರುವ ವಿವಿಧ ಭಾಷೆಗಳ ಮತ್ತು ಸಂಸ್ಕೃತಿಗಳ ಜನರು ಒಗ್ಗೂಡಿದರು. ಸ್ವಾತಂತ್ರ್ಯೋತ್ತರದಲ್ಲಿಯೂ ಜನರು ತಮ್ಮ ಸಾಮಾಜಿಕ, ಆರ್ಥಿಕ, ಭಾಷೆ ಮತ್ತು ಸಂಸ್ಕೃತಿಯ ಅಗತ್ಯತೆಗಳಿಗನುಗುಣವಾಗಿ ಸಮೃದ್ಧ ಜೀವನವನ್ನು ನಡೆಸುವ ಮತ್ತು ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪ ಇಲ್ಲದೆ ರಾಷ್ಟ್ರೀಯ ಸಂಪನ್ಮೂಲಗಳನ್ನು ಬಳಸುವ ಸಮಾನ ಅಭಿಲಾಷೆಗಳಿಂದ ಒಗ್ಗೂಡಿರುವರು. ಈ ಅಭಿಲಾಷೆಗಳನ್ನು ಕಾರ್ಯಗತಗೊಳಿಸುವ ಹೋರಾಟದಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಸರಕಾರಗಳು, ರಾಜಕೀಯ ಪಕ್ಷಗಳು ಮತ್ತು ದೇಶಾದ್ಯಂತವಿರುವ ಜನಕೋಟಿ ವೈವಿಧ್ಯತೆಯಲ್ಲಿಯೂ ಒಕ್ಕಟ್ಟು ಅಗತ್ಯ ಎನ್ನುವುದನ್ನು ಮನಗಾಣಬೇಕು.

ಭಾರತದ ಒಕ್ಕೂಟ ತತ್ವಕ್ಕೆ ಅಪಾಯ :

ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂವಿಧಾನದ ಪ್ರಕಾರ ಪ್ರತ್ಯೇಕ ಘಟಕಗಳು. ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಒಂದೇ ರಾಜಕೀಯ ಪಕ್ಷ ಅಧಿಕಾರದಲ್ಲಿರಲು ಸಾಧ್ಯವಾಗಲಾರದು. ಅಂತಹ ಅಗತ್ಯವನ್ನು ಸಂವಿಧಾನವೂ ನಿರೀಕ್ಷಿಸುವುದಿಲ್ಲ. ಕೇಂದ್ರದಲ್ಲಿ ಒಂದು ಪಕ್ಷ ಅಧಿಕಾರಕ್ಕೆ ಬಂದೊಡನೆ ರಾಜ್ಯಗಳಲ್ಲಿಯೂ ಅದೇ ಪಕ್ಷ ಅಧಿಕಾರಕ್ಕೆ ಬರಲು ಆಳುವ ಪಕ್ಷ ಬಲಪ್ರಯೋಗಿಸುವುದು ಸಂವಿಧಾನಕ್ಕೆ ವಿರುದ್ಧವಾಗಿದೆ. ಒಂದೇ ಪಕ್ಷ ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಅಧಿಕಾರದಲ್ಲಿರಬೇಕೆಂದು ಬಲವಂತ ಮಾಡುವುದರಿಂದ ರಾಜಕೀಯ ಅಸ್ಥಿರತೆ ಉಂಟಾಗುವುದು. ಒಕ್ಕೂಟದ ತತ್ವಕ್ಕೆ ಅಪಾಯ ಬರುವುದು.

1959ರಲ್ಲಿ ಮೊತ್ತಮೊದಲು ವಿರೋಧ ಪಕ್ಷದ, ಅದರಲ್ಲೂ ಕಮ್ಯುನಿಸ್ಟ್ ಪಕ್ಷದ ಸರಕಾರವು ಕೇರಳದಲ್ಲಿ ಅಧಿಕಾರಕ್ಕೆ ಬಂದ ಸ್ವಲ್ಪ ಕಾಲದಲ್ಲಿಯೇ, 'ಕಾನೂನು ಶಿಸ್ತುಪಾಲನೆ'ಯ ನೆಪದಲ್ಲಿ ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರಕಾರವು ಕೇರಳ ಸರಕಾರವನ್ನು ಉರುಳಿಸಿತು. ಮುಂದೆ, 1967-69ರ ಅವಧಿಯಲ್ಲಿ ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಎಡರಂಗ ಪಕ್ಷಗಳು ಅಧಿಕಾರಕ್ಕೆ ಬಂದಾಗ ಪಕ್ಷಾಂತರ ಪ್ರಚೋದಿಸಿ ಕೇಂದ್ರದಲ್ಲಿರುವ ಕಾಂಗ್ರೆಸ್ ಸರಕಾರ ಈ ಎರಡೂ ರಾಜ್ಯ ಸರಕಾರಗಳನ್ನು ಪದಚ್ಯುತಿಗೊಳಿಸಿತು. ಉತ್ತರದ ಅನೇಕ ರಾಜ್ಯಗಳಲ್ಲಿಯೂ ವಿರೋಧ ಪಕ್ಷಗಳ ಸರಕಾರಗಳನ್ನು ಉರುಳಿಸಲಾಯಿತು. ಆಗ ಕೇಂದ್ರದಲ್ಲಿ ಕಾಂಗ್ರೆಸ್‌ನ ಬಹುಮತ ಬಹಳ ಕಡಿಮೆ ಆಗಿತ್ತು. ಆದರೂ, ವಿರೋಧ ಪಕ್ಷಗಳ ರಾಜ್ಯ ಸರಕಾರಗಳ ಮೇಲೆ ಅದರ ಬಲಪ್ರಯೋಗ ಹೆಚ್ಚುತ್ತಿತ್ತು.

ಮುಂದೆ 1971-72ರ ಚುನಾವಣೆಗಳಲ್ಲಿ ಕಾಂಗ್ರೆಸ್ ಕೇಂದ್ರದಲ್ಲಿಯೂ ಎಲ್ಲಾ ರಾಜ್ಯಗಳಲ್ಲಿಯೂ ಮತ್ತೆ ಅಧಿಕಾರಕ್ಕೆ ಬಂದರೂ, ಆರ್ಥಿಕ ಬಿಕ್ಕಟ್ಟು ರಾಜಕೀಯ ಬಿಕ್ಕಟ್ಟು ಒಂದರಮೇಲೊಂದು ಬಂದೊದಗಿ 1975ರಲ್ಲಿ ಆಂತರಿಕ ತುರ್ತುಪರಿಸ್ಥಿತಿಯನ್ನು ಘೋಷಿಸಿ, ರಾಜ್ಯಸರಕಾರಗಳ ಹಕ್ಕುಗಳನ್ನು ಇನ್ನಷ್ಟೂ ಮೊಟಕುಗೊಳಿಸಿತು. ಸಂವಿಧಾನದ 42ನೇ ತಿದ್ದುಪಡಿಯಂತೆ ಕೇಂದ್ರ ಸರಕಾರವು ತನ್ನ ಗಡಿ ರಕ್ಷಣಾ ಪಡೆಗಳನ್ನೂ ಕೇಂದ್ರ ರಿಸರ್ವ್ ಪೋಲೀಸು ಪಡೆಗಳನ್ನೂ ರಾಜ್ಯ ಸರಕಾರಗಳ ಅನುಮತಿ ಇಲ್ಲದೇ ಯಾವ ರಾಜ್ಯಕ್ಕೂ ಕಳಿಸಬಹುದೆಂದಾಯಿತು. ಸಂವಿಧಾನದಲ್ಲಿ 'ಕಾನೂನುಶಿಸ್ತು' ಪಾಲಿಸುವ ಜವಾಬ್ದಾರಿ ರಾಜ್ಯ ಸರಕಾರಗಳಿಗೆ ಸಂಬಂಧಿಸಿದ್ದು. ಆದರೆ ಕೇಂದ್ರ ಸರಕಾರವು ಸಂವಿಧಾನದ ಒಕ್ಕೂಟ ತತ್ವದ ವಿರುದ್ಧ ತನ್ನದೇ ಆದ ಪೋಲೀಸುಪಡೆಗಳನ್ನು ರಚಿಸಿ ರಾಜ್ಯಗಳಿಗೆ ಅವುಗಳಸಮ್ಮತಿ ಇಲ್ಲದೇ ಕಳಿಸುವಮೂಲಕ, ರಾಜ್ಯಗಳ ವ್ಯವಹಾರಗಳಲ್ಲಿ ಕೇಂದ್ರ ಅನವಶ್ಯಕ ಹಸ್ತಕ್ಷೇಪ ಮಾಡುವಂತಾಯಿತು.

ಶಿಕ್ಷಣವು ರಾಜ್ಯ ಸರಕಾರದ ವಿಷಯವಾಗಿತ್ತು. ಆದರೆ ತುರ್ತುಪರಿಸ್ಥಿತಿಯಲ್ಲಿ ಅದನ್ನು ಕೇಂದ್ರ ಮತ್ತು ರಾಜ್ಯಗಳ ಜಂಟಿ ವಿಷಯವನ್ನಾಗಿ ಮಾಡಲಾಯಿತು. ಈಗ ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರವು ರಾಜ್ಯ ಸರಕಾರಗಳಲ್ಲಿ ಹಸ್ತಕ್ಷೇಪ ಮಾಡಬಹುದು. ಸಂವಿಧಾನದಲ್ಲಿ ರಾಜ್ಯ ಸರಕಾರವು ಪ್ರತ್ಯೇಕ ಸ್ವತಂತ್ರ ಆಡಳಿತ ಘಟಕವಾಗಿದ್ದರೂ ಅದರ ಉಚ್ಚ ಅಧಿಕಾರಿಗಳು ಕೇಂದ್ರ ಸರಕಾರದ ಹತೋಟಿಯಲ್ಲಿರುವರು. ರಾಜ್ಯ ಸರಕಾರಗಳಿಗೆ ಈ ಅಧಿಕಾರಿಗಳ ಮೇಲೆ ಯಾವ ನಿಯಂತ್ರಣವೂ ಇಲ್ಲ. ಕಳೆದ ಮೂವತ್ತು ವರ್ಷಗಳಲ್ಲಿ ರಾಜ್ಯ ಸರಕಾರಗಳು ಕೇಂದ್ರ ಸರಕಾರದ ಗೃಹ ಖಾತೆಯ ಆಶ್ರಯದಲ್ಲಿರುವ ವಿಧೇಯ ಖಾತೆಗಳಂತಾಗಿವೆ!

ರಾಜ್ಯ ಸರಕಾರಗಳನ್ನೇಕೆ ಉರುಳಿಸಬೇಕು ?

ಇಂದಿರಾ ಕಾಂಗ್ರೆಸ್ ಸರಕಾರ 9 ರಾಜ್ಯಸರಕಾರಗಳನ್ನು ಉರುಳಿಸಲು ಸಂವಿಧಾನಾತ್ಮಕವಾಗಿ ಯಾವ ನ್ಯಾಯವಿದೆ? ಉ. ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಇಂದಿರಾಕಾಂಗ್ರೆಸ್ ಶೇ.36 ಮತ್ತು ಶೇ. 36.4 ರಷ್ಟೇ ಮತಗಳಿಸಿತ್ತು. ಈ ರಾಜ್ಯಗಳಲ್ಲಿ ಜನ ಬೆಂಬಲ ವಿರೋಧ ಪಕ್ಷಗಳಿಗೇ ಹೆಚ್ಚಾಗಿದ್ದರೂ, ಕೇಂದ್ರದಲ್ಲಿ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನೆಪದಲ್ಲಿ ವಿಧಾನಸಭೆಗಳನ್ನು ವಿಸರ್ಜಿಸಬಹುದೇ? ಹಾಗಾದರೆ, ಇದೇ ಆಧಾರದಲ್ಲಿ, ಕೇರಳ ವಿಧಾನಸಭೆಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಸಂಯುಕ್ತ ರಂಗವು 2/3 ರಷ್ಟು ಬಹುಮತಗಳಿಸಿ ಅಧಿಕಾರಕ್ಕೆ ಬಂದಿರುವುದರಿಂದ ಆ ರಾಜ್ಯದಲ್ಲಿನ ಇಂದಿರಾ ಕಾಂಗ್ರೆಸ್‌ನ ಲೋಕಸಭಾ ಸದಸ್ಯರು ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಬಹುದೆ? ಮುಂದೆ ರಾಜ್ಯ ವಿಧಾನಸಭೆಗಳ ಚುನಾವಣೆಯಲ್ಲಿ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಹೊರತಾದ ಪಕ್ಷಗಳು ಅಧಿಕಾರಕ್ಕೆ ಬಂದರೆ ಆ ರಾಜ್ಯಗಳ ಕಾಂಗ್ರೆಸ್(ಐ) ಲೋಕಸಭಾ ಸದಸ್ಯರು ರಾಜಿನಾಮೆ ನೀಡುವರೆ?

ಕೇಂದ್ರದಲ್ಲಿರುವ ಇಂದಿರಾ ಸರಕಾರ ಪ. ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಿಗೂ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಬೆದರಿಕೆ ಹಾಕುತ್ತಿದೆ. ಕೇಂದ್ರ ವಾಣಿಜ್ಯ ಮಂತ್ರಿ ಪ್ರಣಬ್‌ಕುಮಾರ ಮುಖರ್ಜಿ (ಪ ಬಂಗಾಳದಲ್ಲಿ ಲೋಕಸಭಾ ಚುನಾವಣೆಯಲ್ಲಿ ಸೋತರೂ ರಾಜ್ಯಸಭಾ ಸದಸ್ಯರಾಗಿ ಮಂತ್ರಿಯಾಗಿದ್ದಾರ!) ಪ. ಬಂಗಾಳದ ಎಡರಂಗ ಸರಕಾರವನ್ನು ಕಿತ್ತು ಬಂಗಾಳ ಕೊಲ್ಲಿಗೆ ಬೀಸಾಡುತ್ತೇನೆಂದು ಹೆದರಿಸುತ್ತಿದ್ದಾರೆ! ಪ. ಬಂಗಾಳದಲ್ಲಿ ವಿಧಾನಸಭೆಗೆ ಮತ್ತು ಪಂಚಾಯತುಗಳಿಗೆ ನಡೆದ ಚುನಾವಣೆಗಳಲ್ಲಿ ಎಡರಂಗಕ್ಕೆ ಶೇ. 53 ರಷ್ಟು ಮತಸಿಕ್ಕಿವೆ. ಇಂದಿರಾ ಕಾಂಗ್ರೆಸ್‌ಗೆ ಕೇವಲ ಶೇ. 43ರಷ್ಟು ಮತಸಿಕ್ಕಿವೆ. ಹಾಗಿದ್ದರೂ, ಕೇಂದ್ರ ಸರಕಾರ ಈ ರಾಜ್ಯ ಸರಕಾರವನ್ನು ಪದಚ್ಯುತಗೊಳಿಸುವುದು ಹೇಗೆ? ಇದು ಪ್ರಜಾಪ್ರಭುತ್ವವಲ್ಲ. ರಾಜಕೀಯ ಪ್ರತೀಕಾರ ಅಷ್ಟೆ.

ಪ. ಬಂಗಾಳ ಸರಕಾರವು ಕಳ್ಳಸಂತೆಗಾರರನ್ನು ಮುಂಜಾಗ್ರತಾ ಬಂಧನದ ಹೊಸ ಕಾಯಿದೆಯಂತೆ ವಿಚಾರಣೆ ಇಲ್ಲದೆ ಜೈಲಿಗೆ ಸೇರಿಸಲು ಒಪ್ಪುವುದಿಲ್ಲ. ಪ್ರಣಬ್‌ಕುಮಾರ್ ಮುಖರ್ಜಿಗೆ ಪ. ಬಂಗಾಳ ಸರಕಾರದ ವಿರುದ್ಧ ಕತ್ತಿ ಮಸೆಯಲು ಇದೊಂದು ನೆಪ. ತುರ್ತುಪರಿಸ್ಥಿತಿಯಲ್ಲಿ ಬಂಧಿಸಿದ ಕಳ್ಳಸಾಗಾಣಿಕೆಗಾರರ, ಅಕ್ರಮ ಸಂಗ್ರಹಗಾರರ ಮತ್ತು ಕಳ್ಳಸಂತೆಗಾರರ ಹೆಸರುಗಳನ್ನು ಪ್ರಕಟಿಸಲೇ ಇಲ್ಲ. ಅವರಲ್ಲಿ ಹೆಚ್ಚಿನವರನ್ನು ಸಂಶಯಯುತ ಕಾರಣಗಳಿಂದ ಬಿಡುಗಡೆ ಮಾಡಲಾಯಿತು. ಹಿಂದಿನ ಕೇರಳ ಸರಕಾರದ ಮಂತ್ರಿಗಳು ಇಂತಹ ಸಮಾಜ ದ್ರೋಹಿಗಳನ್ನು ಬಿಡುಗಡೆ ಮಾಡಲು ಲಂಚ ತೆಗೆದುಕೊಂಡಿದ್ದಾರೆಂದು ವಿಧಾನಸಭೆಯಲ್ಲಿ ಪ್ರಸ್ತಾಪ ಬಂದಿತ್ತು. ವಿಚಾರಣೆ ಇಲ್ಲದೆ ದಸ್ತಗಿರಿ ಮಾಡುವುದು ಪ್ರಜಾಪ್ರಭುತ್ವಕ್ಕೂ ನಾಗರೀಕ ಹಕ್ಕುಗಳಿಗೂ ವಿರುದ್ಧವಾಗಿದೆ. ಆದುದರಿಂದ ಈಗ ಇರುವ ಕಾನೂನುಗಳನ್ನೇ ಬಳಸಿ ಸಮಾಜ ಘಾತುಕರ ವಿರುದ್ಧ ಶಿಸ್ತು ಕ್ರಮ ಕೈಕೊಳ್ಳುವೆವು. ರಾಜಕೀಯ ಭ್ರಷ್ಟಾಚಾರಕ್ಕೆಡೆಕೊಡುವ ಮುಂಜಾಗ್ರತಾ ಬಂಧನದ ಶಾಸನವನ್ನು ಬಳಸುವುದಿಲ್ಲ ಎಂದು ಪ. ಬಂಗಾಳ, ಕೇರಳ ರಾಜ್ಯ ಸರಕಾರಗಳು ನಿರ್ಧರಿಸಿದರೆ ತಪ್ಪೇನು? ಅದಕ್ಕಾಗಿ 2/3ರಷ್ಟು ಬಹುಮತ ಪಡೆದು ಅಧಿಕಾರಕ್ಕೆ ಬಂದ ಈ ರಾಜ್ಯ ಸರಕಾರಗಳನ್ನು ಉರುಳಿಸುವುದರಲ್ಲಿ ನ್ಯಾಯವಿದೆಯೆ?

ಆರ್ಥಿಕ ಬಿಕ್ಕಟ್ಟು, ಬೆಲೆ ಏರಿಕೆಗೆ ಕಾರಣ ಯಾರು?

ಸಧ್ಯದ ಸಂವಿಧಾನದಲ್ಲಿ ಆರ್ಥಿಕ ಅಧಿಕಾರ ಹೆಚ್ಚಾಗಿ ಕೇಂದ್ರಕ್ಕೆ ಮೀಸಲು. ರಾಜ್ಯಗಳು ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಹೊಣೆಹೊತ್ತಿರುವುದಾದರೂ, ಯೋಜನೆಗಳಿಗೆ ಬೇಕಾಗುವಷ್ಟು ಸಂಪನ್ಮೂಲಗಳಿಗಾಗಿ ಕೇಂದ್ರ ಸರಕಾರಕ್ಕೇ ಮೊರೆಹೋಗಬೇಕು. ಮಾರಾಟ ತೆರಿಗೆ ಒಂದು ಬಿಟ್ಟು ಉಳಿದ ಎಲ್ಲಾ ಪ್ರಮುಖ ತೆರಿಗೆಗಳೂ (ಆದಾಯ ತೆರಿಗೆ, ಅಬಕಾರಿ ತೆರಿಗೆ, ರಫ್ತು ಆಮದುಗಳ ಮೇಲೆ ತೆರಿಗೆ ಇತ್ಯಾದಿ)ಕೇಂದ್ರಕ್ಕೇ ಮೀಸಲು. ಕೃತಕ ಹಣ ಸೃಷ್ಟಿಮಾಡುವುದು, ದೇಶವಿದೇಶಗಳಿಂದ ಸಾಲ ಎತ್ತುವುದು,ಕೇಂದ್ರವೇ. ಹಣಕಾಸು ಆಯೋಗದಂತೆ ಸಂವಿಧಾನಕ್ಕನುಗುಣವಾಗಿ ಸಂಸತ್ತಿನ ಅನುಮತಿ ಪಡೆದು ಸಂಪನ್ಮೂಲಗಳನ್ನು ಕೇಂದ್ರ ಮತ್ತು ರಾಜ್ಯಗಳೊಳಗೆ ನ್ಯಾಯಯುತವಾಗಿ ಹಂಚುವ ಏರ್ಪಾಡಿದ್ದರೂ, ಪಂಚವಾರ್ಷಿಕ ಯೋಜನೆಯು ಪ್ರಾರಂಭವಾದಂದಿನಿಂದ ಯೋಜನಾ ಆಯೋಗ ಹೇಳಿದಂತೆ, ಅಂದರೆ ಕೇಂದ್ರದಲ್ಲಿ ಆಳುವ ಪಕ್ಷ ಹೇಳಿದಂತೆ ಆರ್ಥಿಕ ಅಭಿವೃದ್ಧಿಗೆ ಸಾಲ ಸಹಾಯಗಳನ್ನು ರಾಜ್ಯಗಳಿಗೆ ಹೆಚ್ಚುಹೆಚ್ಚಾಗಿ ಒದಗಿಸಲಾಗುತ್ತಿದೆ. ಅಂದರೆ, ಕೇಂದ್ರದ ಆಳುವಪಕ್ಷಕ್ಕೆ ರಾಜ್ಯಸರಕಾರಗಳು ವಿಧೇಯವಾಗಿದ್ದರೆ, ಆರ್ಥಿಕ ಅಭಿವೃದ್ಧಿಗೆ ಸಾಲ ಸಹಾಯ ದೊರಕೀತು, ಇಲ್ಲವಾದರೆ ಕಷ್ಟ! ಈ ವಿಷಯವನ್ನು ಮುಚ್ಚುಮರೆ ಇಲ್ಲದೆ ಚುನಾವಣೆ ಪ್ರಚಾರದಲ್ಲಿಯೂ ಬಳಸಲಾಗುತ್ತಿದೆ. ಜನರನ್ನು ವಿರೋಧ ಪಕ್ಷಗಳಿಂದ ಕೇಂದ್ರದಲ್ಲಿನ ಆಳುವ ಪಕ್ಷದತ್ತ ಮನ ಒಲಿಸಲಾಗುತ್ತಿದೆ.

ಕೇಂದ್ರ ಸರಕಾರದ ಆರ್ಥಿಕ ನೀತಿ, ಕಾರ್ಮಿಕ ನೀತಿ, ತೆರಿಗೆ ನೀತಿ, ಪಂಚವಾರ್ಷಿಕ ಯೋಜನೆ, ಮುಂತಾದವುಗಳಿಂದ ಉದ್ಭವಿಸುವ ಆರ್ಥಿಕ ಬಿಕ್ಕಟ್ಟು, ನಿರುದ್ಯೋಗ, ಬೆಲೆ ಏರಿಕೆ, ಅಸಮಾನತೆ, ಬಡತನ ದಾರಿದ್ರ್ಯಗಳಿಗೆ ರಾಜ್ಯ ಸರಕಾರಗಳೇ ಹೊಣೆಹೊರಬೇಕಾಗುವುದು. ಜನರುಎದಿರುನೋಡುತ್ತಿರುವುದು ರಾಜ್ಯ ಸರಕಾರಗಳನ್ನು. ಆದರೆ, ಈ ವಿಷಯಗಳಲ್ಲಿ ರಾಜ್ಯ ಸರಕಾರಗಳಿಗೆ ಯಾವ ಅಧಿಕಾರ ಅಸ್ಪದವೂ ಇಲ್ಲ. ರಾಜ್ಯ ಸರಕಾರಗಳ ಪ್ರಾತಿನಿಧ್ಯವಿರುವ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಕೇವಲ ಔಪಚಾರಿಕವಾಗಿದ್ದು, ಅದಕ್ಕೆ ಯಾವ ಅಧಿಕಾರವೂ ಇರುವುದಿಲ್ಲ.

1979-80ರ ಕೇಂದ್ರ ಮುಂಗಡ ಪತ್ರದಲ್ಲಿ ಅಬಕಾರಿ ತೆರಿಗೆ ರೂ. 7770 ಕೋಟಿಯಾಗಿತ್ತು. ಇದರಲ್ಲಿ ಹತ್ತಿಬಟ್ಟೆಗೆ ರೂ. 700ಕೋಟಿ, ಸೀಮೆ ಎಣ್ಣೆಗೆ ರೂ. 150 ಕೋಟಿ, ಸಕ್ಕರೆಗೆ ರೂ. 132 ಕೋಟಿ, ಬೆಂಕಿಪೆಟ್ಟಿಗೆಗೆ ರೂ. 49 ಕೋಟಿ ಮತ್ತು ಸಾಬೂನಿಗೆ ರೂ. 19 ಕೋಟಿಯಷ್ಟು ಅಪ್ರತ್ಯಕ್ಷ ತೆರಿಗೆ ವಿಧಿಸಲಾಗಿತ್ತು. ಪರಿಣಾಮವಾಗಿ ಜನರ ದಿನಬಳಕೆಯ ವಸ್ತುಗಳ ಬೆಲೆಗಳು ನಾಗಾಲೋಟದಲ್ಲಿ ಏರತೊಡಗಿದವು. ಆದರೆ ಕಂಪೆನಿಗಳ ಮತ್ತು ಶ್ರೀಮಂತ ವ್ಯಕ್ತಿಗಳ ಆದಾಯ ತೆರಿಗೆ ಕೇವಲ ರೂ. 2728 ಕೋಟಿಯಾಗಿತ್ತು. ಅಂದರೆ, ಶ್ರೀಮಂತರ ಆದಾಯ ರಕ್ಷಿಸಿ ಜನಸಾಮಾನ್ಯರ ಗ್ರಾಹಕ ಶಕ್ತಿಯನ್ನು ಕ್ಷಯಿಸುವ ಈ ಧೋರಣೆಯ ವಿರುದ್ಧ ರಾಜ್ಯ ಸರಕಾರಗಳು ಏನೂ ಮಾಡುವಂತಿರಲಿಲ್ಲ.

ಕೊರತೆ ಇರುವ ಅವಶ್ಯಕ ವಸ್ತುಗಳಾದ ಸಕ್ಕರೆ, ಈರುಳ್ಳಿ, ಇತ್ಯಾದಿಗಳನ್ನು ರಫ್ತು ಮಾಡುವುದರಿಂದಲೂ, ಸೀಮೆಎಣ್ಣೆ, ಅಡಿಗೆ ತೈಲ, ಡೀಸೆಲ್ ರಬ್ಬರ್, ಇತ್ಯಾದಿಗಳನ್ನು ಸಕಾಲದಲ್ಲಿ ಸಾಕಷ್ಟು ಆಮದು ಮಾಡಿಕೊಳ್ಳದಿರುವುದರಿಂದಲೂ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಗಳು ಏರುತ್ತಿರುವಾಗ ರಾಜ್ಯ ಸರಕಾರಗಳು ಏನೂಮಾಡುವಂತಿಲ್ಲ. ಜೀವನಾವಶ್ಯಕವಾದ 7-8 ವಸ್ತುಗಳನ್ನಾದರೂ ದೇಶಾದ್ಯಂತ ಸುಲಭ ಹಾಗೂ ಸಮಾನ ಬೆಲೆಗೆ ಜನಸಾಮಾನ್ಯರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒದಗಿಸಿಕೊಡುವ ಯೋಜನೆಯನ್ನು ಪ. ಬಂಗಾಳದ ಮುಖ್ಯ ಮಂತ್ರಿ ಕಾಂ. ಜ್ಯೋತಿಬಸು ಆಗಿನ ಪ್ರಧಾನಿ ಮುರಾರ್ಜಿ ದೇಸಾಯಿಯವರಿಗೆ ಸಲಹೆ ಮಾಡಿದ್ದರೂ, ಆ ಕುರಿತು ಜನತಾ ಸರಕಾರವು ಲಕ್ಷಿಸಲೇ ಇಲ್ಲ. ಕಾಂಗ್ರೆಸ್, ಜನತಾ, ಲೋಕದಳ ಕೇಂದ್ರ ಸರಕಾರಗಳು ರಾಜ್ಯ ಸರಕಾರಗಳ ಅಧಿಕಾರ ವ್ಯಾಪ್ತಿಯನ್ನು ಮೊಟಕುಗೊಳಿಸುತ್ತಲೇ ಬಂದವು. ಈಗಲೂ ಆರ್ಥಿಕ ರಾಜಕೀಯ ಅಧಿಕಾರಗಳ ಕೇಂದ್ರೀಕರಣ ಆಗುತ್ತಲೇ ಇದೆ.

ಆಹಾರಧಾನ್ಯಗಳ ಮತ್ತು ಕೃಷಿ ಉತ್ಪಾದನೆಗಳ ಬೆಲೆಗಳನ್ನು ನಿಗದಿ ಮಾಡುವುದು ಕೇಂದ್ರ ಸರಕಾರ. ಅಧಿಕ ಬೆಳೆಯಾದಾಗ ರೈತರಿಗೆ ಬೆಲೆ ಕುಸಿಯದಂತೆ ನೋಡಿಕೊಳ್ಳುವುದೂ, ಕೊರತೆ ಪರಿಸ್ಥಿತಿಯಲ್ಲಿ ಗ್ರಾಹಕರಿಗೆ ಬೆಲೆಏರದಂತೆ ನೋಡಿಕೊಳ್ಳುವುದೂ ಕೇಂದ್ರ ಸರಕಾರ. ಆದರೆ, ಕೇಂದ್ರ ಸರಕಾರ ತನ್ನ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸದೆ ಶ್ರೀಮಂತ ರೈತರ ಮತ್ತು ಗುತ್ತೇದಾರಿ ಬಂಡವಾಳಗಾರರ, ಬಹುರಾಷ್ಟ್ರೀಯ ಸಂಸ್ಥೆಗಳ ಪರವಾಗಿಯೇ ತನ್ನ ಧೋರಣೆಗಳನ್ನು ರೂಪಿಸುವಾಗಲೂ, ರಾಜ್ಯ ಸರಕಾರಗಳೂ ಏನೂ ಮಾಡುವಂತಿಲ್ಲ.

ರಾಜ್ಯಗಳಿಗೆ ಸ್ವಾಯತ್ತತೆಬೇಕು :

ರಾಜ್ಯಗಳಿಗೆ ಸಂವಿಧಾನದಲ್ಲಿ ಸೂಚಿಸಿರುವ ತಮ್ಮ ವಿಷಯಗಳ ಕುರಿತು ಶಾಸನ ಜಾರಿಗೊಳಿಸಲೂ ಸಂಪೂರ್ಣ ಹಕ್ಕಿಲ್ಲ. ಅವುಗಳ ಪ್ರತಿಯೊಂದು ಶಾಸನಕ್ಕೂ ಕೇಂದ್ರ ಸರಕಾರದ ಅನುಮತಿಬೇಕು. 1957ರಲ್ಲಿ ಕೇರಳದ ಭೂಸುಧಾರಣಾ ಮಸೂದೆ 1½ ವರ್ಷ ಕೇಂದ್ರದ ಅನುಮತಿಗಾಗಿ ಕಾಯಬೇಕಾಯ್ತು. ಅದರ ಅಂಗೀಕಾರಕ್ಕಾಗಿ ಚಳವಳ ಮಾಡಬೇಕಾಯಿತು, 1978ರಲ್ಲಿ ಪ. ಬಂಗಾಳದ ಎಡರಂಗ ಸರಕಾರದ ಮಸೂದೆಯನ್ನು ಕೇಂದ್ರ ಸರಕಾರ ಒಂದು ವರ್ಷ ತಡೆಹಿಡಿಯಿತು. ಪ. ಬಂಗಾಳ ಸರಕಾರವು ಅಂಗೀಕರಿಸಿದ ಗುಪ್ತಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಮಸೂದೆಯನ್ನು ಕೇಂದ್ರ ಸರಕಾರ ತಿರಸ್ಕರಿಸಿತು, ತ್ರಿಪುರಾ ರಾಜ್ಯದ ಎಡರಂಗ ಸರಕಾರದ ಗುಡ್ಡಗಾಡು ಜನರಿಗೆ ಪ್ರತ್ಯೇಕ ಸ್ವಾಯತ್ತತೆವುಳ್ಳ ಒಂದು ಪ್ರದೇಶ ರಚಿಸಬೇಕೆಂದು ಸಂವಿಧಾನದಲ್ಲಿ ಅದಕ್ಕೆ ಮಾನ್ಯತೆ ನೀಡಬೇಕೆಂದು ಮಸೂದೆ ಮಾಡಿದ್ದರೂ ಕೇಂದ್ರ ಸರಕಾರದ ಅನುಮತಿ ಸಿಗಲಿಲ್ಲ. 20-ಅಂಶಗಳ ಆರ್ಥಿಕ ಕಾರ್ಯಕ್ರಮಗಳನ್ನು ಎಲ್ಲಾ ರಾಜ್ಯ ಸರಕಾರಗಳೂ ಅನುಸರಿಸದಿದ್ದರೆ, ಅವುಗಳನ್ನು ಪದಚ್ಯುತಗೊಳಿಸುವುದಾಗಿ ಇಂದಿರಾ ಸರಕಾರ ಬೆದರಿಸುತ್ತಿದೆ. ವಿವಿಧ ರಾಜ್ಯಗಳಲ್ಲಿ ವಿವಿಧ ರಾಜಕೀಯ ಪಕ್ಷಗಳು ತಮ್ಮದೇ ಆದ ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳ [ಆಧಾರದಲ್ಲಿ ಜನಬೆಂಬಲ ಪಡೆದು ಅಧಿಕಾರಕ್ಕೆ ಬಂದಿರುವಾಗ ಕೇಂದ್ರದಲ್ಲಿರುವ ಒಂದೇ ಪಕ್ಷದ ಆರ್ಥಿಕ ನೀತಿಯನ್ನು ಅನುಸರಿಸಲು ಒತ್ತಾಯಿಸುವುದು ಸಂವಿಧಾನದ ಒಕ್ಕೂಟ ತತ್ವಕ್ಕೆ ವಿರೋಧವಾಗಿದೆ,

ಕೇಂದ್ರದ ಅಧಿಕಾರ ವ್ಯಾಪ್ತಿಯು ರಕ್ಷಣೆ, ವಿದೇಶ ವ್ಯವಹಾರ, ಹಣಕಾಸು, ಸಂಪರ್ಕ ಮತ್ತು ಆರ್ಥಿಕ ಸಹಮತ ಹಾಗೂ ಅನ್ಯೋನ್ಯ ಸಂಬಂಧಗಳಿಗೆ ಸೀಮಿತವಾಗಿರಬೇಕು. ಉಳಿದ ಎಲ್ಲಾ ವಿಷಯಗಳಲ್ಲಿ ರಾಜ್ಯ ಸರಕಾರಗಳಿಗೆ ಶಾಸನ ರಚಿಸಲು, ಆಡಳಿತೆ ನಡೆಸಲು ಸ್ವಾಯತ್ತತೆ ಇರಬೇಕು. ಸಂವಿಧಾನದಲ್ಲಿ ಸೂಚಿಸಿದ ಕೇಂದ್ರ ಮತ್ತು ಜಂಟಿ ವಿಷಯಗಳ ಹೊರತು ಮಿಕ್ಕ ಎಲ್ಲಾ ವಿಷಯಗಳಲ್ಲಿ ರಾಜ್ಯ ಸರಕಾರಗಳಿಗೆ ಶಾಸನ ರಚಿಸಲು ಅಧಿಕಾರವಿರಬೇಕು. ಯೋಜನಾ ಆಯೋಗ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ರಾಜ್ಯ ಸರಕಾರಗಳ ಪ್ರತಿನಿಧಿಗಳಿದ್ದು ಸಂವಿಧಾನದಲ್ಲಿ ಇವುಗಳ ಪಾತ್ರವನ್ನು ಸ್ಪಷ್ಟವಾಗಿ ತಿಳಿಸಬೇಕು. ರಾಜ್ಯ ಸರಕಾರಗಳ ರಾಜ್ಯಪಾಲರು ಕೇಂದ್ರ ಸರಕಾರದ ಕೈಗೊಂಬೆಗಳಾಗಿರಬಾರದು. ಕೇಂದ್ರ ಸರಕಾರದಲ್ಲಿರುವ ಆಳುವ ಪಕ್ಷದ ಪರವಾಗಿ ಪಕ್ಷಾಂತರ ಪ್ರಚೋದಿಸುವವರಾಗಿರಕೂಡದು. ರಾಜ್ಯ ವಿಧಾನಸಭೆಗಳ ವಿಶ್ವಾಸ ಪಡೆವವರೇ ರಾಜ್ಯಪಾಲರಾಗಿರಬೇಕು. ಇಂದಿರಾಗಾಂಧಿ ಸರಕಾರ ರಾಜ್ಯಪಾಲರ ಮೂಲಕ ವಿರೋಧ ಪಕ್ಷಗಳ ಅನೇಕ ರಾಜ್ಯ ಸರಕಾರಗಳನ್ನು ಉರುಳಿಸಿದೆ. ಈಗಲೂ ಅದೇ ದಾರಿ ಹಿಡಿದಿದೆ. ಇದು ಭಾರತದ ಒಕ್ಕೂಟದ ತತ್ವಕ್ಕೂ ಪ್ರಜಾಪ್ರಭುತ್ವಕ್ಕೂ ಅಪಾಯಕಾರಿ.

ಕೇಂದ್ರ-ರಾಜ್ಯ ಸಂಬಂಧಗಳ ಕುರಿತು ದೇಶಾದ್ಯಂತ ಮರುಪರಿಶೀಲನೆಯಾಗಬೇಕು, ○

ಕೇರಳ-ಹೊಸ ಸರಕಾರದ ರಚನೆಯ ಬಳಿಕ

ಇ. ಎಂ. ಎಸ್. ನಂಬೂದಿರಿಪಾಡ್

ಕಳೆದ ಜನವರಿ ಇಪ್ಪತ್ತೈದರಂದು ತ್ರಿವೆಂಡ್ರಮ್‌ನ ರಾಜಭವನದ ಆವರಣದಲ್ಲಿ ಸೇರಿದ್ದ ಅಪಾರ ಜನಸ್ತೋಮ ರಾಜ್ಯದಲ್ಲಿ ಮತ್ತೊಮ್ಮೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರಕಾರ ರಚನೆಯಾಗಿರುವುದರ ಬಗ್ಗೆ ಸಹಜವಾಗಿಯೇ ತುಂಬಾ ಹರ್ಷಿತರಾಗಿದ್ದರು. ಆದರೆ ಅದೇ ಕಾಲಕ್ಕೆ 1957ರ ಕಮ್ಯುನಿಸ್ಟ್ ಸರಕಾರ ಮತ್ತು 1967ರ ಸಂಯುಕ್ತರಂಗ ಸರಕಾರಕ್ಕೆ ಬಂದೊದಗಿದ ಅವಸ್ಥೆ ಈ ಸರಕಾರಕ್ಕೂ ಬರಲಿರುವುದೇ ಎಂಬ ಕಳವಳವೂ ಅವರಲ್ಲಿದ್ದುದು ಕಂಡು ಬರುತ್ತಿತ್ತು.

ಕೇಂದ್ರದಲ್ಲಿ ಇದೀಗ ಅಧಿಕಾರದಲ್ಲಿರುವ ಸರಕಾರ ಮತ್ತು ಅದಕ್ಕೆ ಬೆನ್ನೆಲುಬಾಗಿರುವ ದುಷ್ಟಕೂಟವು ಯಾವುದೇ ರಾಜ್ಯದಲ್ಲೂ ತಮ್ಮ ಪಕ್ಷವಲ್ಲದೆ ಬೇರೊಂದು ಪಕ್ಷಕ್ಕೆ ಸೇರಿದ ಸರಕಾರಗಳು ಅಸ್ತಿತ್ವದಲ್ಲಿರುವುದನ್ನು ಖಂಡಿತವಾಗಿ ಸಹಿಸುವುದಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿರುವ ಹಿನ್ನೆಲೆಯಲ್ಲಿ ಕೇರಳದ ಜನತೆ ವ್ಯಾಕುಲಿತರಾಗಿರುವುದರಲ್ಲಿ ಆಶ್ಚರ್ಯವಿಲ್ಲ. 1959ರಲ್ಲಿ ಕುಖ್ಯಾತ 'ವಿಮೋಚನಾ ಸಮರ'ದ ಮೂಲಕ ಮೊದಲನೆಯ ಕಮ್ಯುನಿಸ್ಟ್ ಸರಕಾರವನ್ನು ವಜಾಗೊಳಿಸಿದ ಮತ್ತು 1967-69ರಲ್ಲಿ ಆಳುವ ಸಂಯುಕ್ತ ರಂಗದಿಂದ ಪಕ್ಷಾಂತರಗಳಿಗೆ ಪ್ರಚೋದನೆ ನೀಡಿ ಸರಕಾರವನ್ನು ಪತನಗೊಳಿಸಿದ ವ್ಯಕ್ತಿಯೇ ಇಂದು ದೇಶದ ಪ್ರಧಾನಿಯಾಗಿದ್ದಾರೆ.

ಮುಖ್ಯಮಂತ್ರಿಯವರ ಘೋಷಣೆ :

ಕಳೆದ ಚುನಾವಣೆಗಳಿಗೆ ಪ್ರಚಾರ ನಡೆಯುತ್ತಿದ್ದ ವೇಳೆಯಲ್ಲಿ ಕೇರಳ ಪ್ರದೇಶ ಕಾಂಗ್ರೆಸ್(ಐ) ಸಮಿತಿಯ ಅಧ್ಯಕ್ಷರು ಎಡ ಪ್ರಜಾಪ್ರಭುತ್ವ ರಂಗಕ್ಕೆ ಮತ ನೀಡುವುದರ ವಿರುದ್ಧ ಕೇರಳದ ಜನತೆಗೆ ಸಾಕಷ್ಟು ಬೆದರಿಕೆಯೊಡ್ಡಿದ್ದರು. ಎಡ ರಂಗದ ಸರಕಾರ ಅಧಿಕಾರಕ್ಕೆ ಬಂದರೆ ಅದು ಕೇಂದ್ರದೊಡನೆ ಸದಾಕಾಲ ಘರ್ಷಣೆಯ ಮಾರ್ಗವನ್ನವಲಂಬಿಸುವ ಕಾರಣ ಕೇರಳದ ಜನತೆಯ ಸಮಸ್ಯೆಗಳು ಪರಿಹಾರವಾಗಲು ಸಾಧ್ಯವೇ ಇಲ್ಲವೆಂದು ಅವರು ಹೇಳಿದ್ದರು. ತನ್ನ ಎರಡು ದಿನಗಳ ಬಿರುಸಿನ ಚುನಾವಣಾ ಪ್ರಚಾರದ ಕಾಲದಲ್ಲಿ ಸ್ವತಃ ಪ್ರಧಾನ ಮಂತ್ರಿ ಇಂದಿರಾಗಾಂಧಿ ಅವರೂ ಈ ಮಾತುಗಳನ್ನು ಪುನರುಚ್ಚರಿಸಿದ್ದರು. ಈ ಹಿನ್ನೆಲೆಯಲ್ಲಿ ಪ್ರಧಾನಿ ಇಂದಿರಾ, ಕೇಂದ್ರದಲ್ಲಿನ ಅವರ ಸಹೋದ್ಯೋಗಿಗಳು ಮತ್ತು ಕೇರಳದ ಅವರ ಮಿತ್ರರು ಕೇರಳದ ಹೊಸ ಸರಕಾರ ಸುಗಮವಾಗಿ ಕಾರ್ಯವಹಿಸಿಕೊಂಡು ಹೋಗಲು ಬಿಡುವರೇ? ರಾಜಕೀಯ ಮತ್ತು ಆಡಳಿತೆಯ ಕ್ರಮಗಳ ಮೂಲಕ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸಿಕೊಳ್ಳಲು ಎಂದಾದರೂ ಬಿಟ್ಟಾರೆಯೇ?

ಮುಖ್ಯಮಂತ್ರಿ ಕಾಂ. ನಾಯನಾರ್ ಅವರಂತೂ ತನ್ನ ಸರಕಾರವಾಗಲೀ ಅಥವಾ ಆಳುವ ಸಂಯುಕ್ತ ರಂಗವಾಗಲೀ ಕೇಂದ್ರದೊಡನೆ ಘರ್ಷಣೆಯ ಮಾರ್ಗವನ್ನು ಅನುಸರಿಸುವುದಿಲ್ಲವೆಂದು ಗಣರಾಜ್ಯೋತ್ಸವ ದಿನದಂದು ತಾನುಮಾಡಿದ ಮೊದಲ ಆಕಾಶವಾಣಿ ಪ್ರಸಾರ ಭಾಷಣದಲ್ಲೇ ಸ್ಪಷ್ಟವಾಗಿ ಸಾರಿದ್ದಾರೆ. ವಿರೋಧಪಕ್ಷಗಳು ಮತ್ತು ರಾಜ್ಯ ಸರಕಾರಗಳು ಕೇಂದ್ರ ಸರಕಾರದೊಂದಿಗೆ ಹೇಗೆ ವರ್ತಿಸಬೇಕೆಂದು ಕೇಂದ್ರ ಸರಕಾರ ಮತ್ತು ಕೇರಳದ ವಿರೋಧ ಪಕ್ಷಗಳು ಬಯಸುತ್ತಿವೆಯೋ ಅದೇ ರೀತಿಯ ವರ್ತನೆಯನ್ನು ಅವೂ ಕೇರಳ ಸರಕಾರದ ಬಗ್ಗೆ ತೋರ್ಪಡಿಸಲಿ ಎಂದೂ ಕಾಂ. ನಾಯನಾರ್ ವಿನಂತಿಸಿದ್ದಾರೆ. ದೇಶದ ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳು ನಿರಂತರ ಮಾತುಕತೆಗಳನ್ನು ನಡೆಸಿ, ಪರಸ್ಪರ ಸಹಕಾರ ನೀಡಬೇಕಾದುದು ರಾಜಕೀಯವಾಗಿಯೂ ಸಾಂವಿಧಾನಿಕವಾಗಿಯೂ ಅಗತ್ಯವೆಂದೂ ಅವರು ಹೇಳಿದ್ದಾರೆ. ಇದೇ ಹೇಳಿಕೆಯನ್ನು ರಾಜ್ಯದ ಹೊಸ ಶಾಸಕಾಂಗದ ಮೊದಲ ಅಧಿವೇಶನಕ್ಕೆ ನೀಡಿದ ರಾಜ್ಯಪಾಲೆಯವರ ಭಾಷಣದಲ್ಲೂ ಒತ್ತಿ ಹೇಳಲಾಗಿದೆ.

ಅಂದು ಮತ್ತು ಇಂದು :

1957ರ ಪರಿಸ್ಥಿತಿಗೂ 1980ರ ಪರಿಸ್ಥಿತಿಗೂ ನಡುವೆ ಇರುವ ವ್ಯತ್ಯಾಸವನ್ನು ಕೇರಳದ ಕಾಂಗ್ರೆಸ್ (ಐ)ಪಕ್ಷ ಅರ್ಥಮಾಡಿಕೊಂಡಂತಿದೆ. 1957ರ ಸರಕಾರ ಕೆಲವೇ ಮಂದಿ ಪಕ್ಷಾತೀತರ ಬೆಂಬಲ ಹೊಂದಿದ್ದ ಹೆಚ್ಚು ಕಡಿಮೆ ಸಂಪೂರ್ಣವಾಗಿ ಕಮ್ಯುನಿಸ್ಟ್ ಪಕ್ಷದ ನಿಯಂತ್ರಣದಲ್ಲಿದ್ದ ಸರಕಾರವಾಗಿತ್ತು. ಈ ಸರಕಾರದ ವಿರುದ್ಧ ಉಳಿದ ಪಕ್ಷಗಳನ್ನು ಪ್ರಚೋದಿಸಿ ಎತ್ತಿಕಟ್ಟುವುದು ಕಷ್ಟದ ಕೆಲಸವೇನೂ ಆಗಿರಲಿಲ್ಲ. ಅಷ್ಟೇ ಅಲ್ಲದೆ ದೇಶಾದ್ಯಂತ ಕಾಂಗ್ರೆಸ್ ಸರಕಾರಗಳೇ ಅಧಿಕಾರ ನಡೆಸುತ್ತಿದ್ದ ಆಕಾಲದಲ್ಲಿ ಕೇರಳ ಸರಕಾರವೊಂದೇ ಕಾಂಗ್ರೆಸ್ಸೇತರ ಸರಕಾರವಾಗಿತ್ತು.

ಆದರೆ ಇಂದಿನ ಪರಿಸ್ಥಿತಿಯೇ ಬೇರೆ. ಈಗಿನ ಸರಕಾರ ಕಮ್ಯುನಿಸ್ಟ್ ಮತ್ತು ಕಮ್ಯುನಿಸ್ಟೇತರ ಪಕ್ಷಗಳ ಮೈತ್ರಿಯ ಆಧಾರದಲ್ಲಿ ರಚಿತವಾಗಿದೆ. ದೇಶಾದ್ಯಂತ ಕಾಂಗ್ರೆಸ್ಸಿಗಿದ್ದ ಏಕಸ್ವಾಮ್ಯ ತಪ್ಪಿಹೋಗಿ ಹಲವಾರು ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳ ಸರಕಾರಗಳಿವೆ. (ಪ. ಬಂಗಾಳ, ತ್ರಿಪುರಾ ಮತ್ತು ಕೇರಳಗಳನ್ನು ಬಿಟ್ಟು ಉಳಿದ ಒಂಭತ್ತು ಕಾಂಗ್ರೆಯೇತರ ಸರಕಾರಗಳನ್ನು ಆಮೇಲೆ ವಜಾಗೊಳಿಸಲಾಯಿತು. ಅನು.) ಕೇರಳದ ಕಾಂಗ್ರೆಸ್ (ಐ) ಪಕ್ಷಕ್ಕೆ ಈ ವ್ಯತ್ಯಾಸ ಮನವರಿಕೆಯಾಗಿದೆ. ಈಗಿನ ಆಡಳಿತರಂಗದಲ್ಲಿ ಕಾಂಗ್ರೆಸ್ ಮತ್ತು ಕೇರಳ ಕಾಂಗ್ರೆಸ್ ನಂತಹ 'ಪ್ರಜಾಪ್ರಭುತ್ವವಾದಿ' ಪಕ್ಷಗಳೂ ಇವೆಯೆಂದು ಕಾಂಗ್ರೆ ಮುಂದಾಳುಗಳು ಹೇಳಿಕೆಯಿತ್ತಿರುವುದು ಇದಕ್ಕೆ ನಿದರ್ಶನ. ಈ 'ಪ್ರಜಾಪ್ರಭುತ್ವವಾದಿ' ಪಕ್ಷಗಳು ಮತ್ತು ಎಡ ಪಂಥೀಯ ಪಕ್ಷಗಳ ಮೈತ್ರಿ ಮುಂದುವರಿಯುತ್ತಿರುವವರೆಗೆ 1959ರ ಅಥವಾ 1969ರ ಘಟನೆಗಳನ್ನು ಪುನರಾವರ್ತಿಸುವಂತೆ ಮಾಡಲು ಸಾಧ್ಯವಿಲ್ಲವೆಂದು ಕಾಂಗ್ರೆ ಮುಂದಾಳುಗಳಿಗೂ ಗೊತ್ತಿದೆ.

ಅದೇ ವೇಳೆಗೆ ಸಿ.ಪಿ.ಐ.(ಎಂ) ಮತ್ತು ಅದರ ಮಿತ್ರ ಪಕ್ಷಗಳೂ ತಮ್ಮೊಳಗಿನ ಐಕ್ಯವನ್ನು ಉಳಿಸಿಕೊಳ್ಳಲು ಬದ್ಧವಾಗಿವೆ ಮಾತ್ರವಲ್ಲ, ಕಾರಣಾಂತರಗಳಿಂದ ಚುನಾವಣೆಯ ವೇಳೆ ಅಥವಾ ಅದಕ್ಕೂ ಹಿಂದಿನಿಂದ ಕಾಂಗ್ರೆಸ್ (ಐ) ಜೊತೆಗೆ ಕೂಡಿಕೊಂಡಿರುವ ಮತ್ತು ಇದೀಗ ತಮ್ಮ ನಿಲುವಿಯ ಕುರಿತು ಪುನರಾಲೋಚನೆಗೆ ತೊಡಗಿರುವ ವಿರೋಧ ಪಕ್ಷಗಳಲ್ಲಿನ ಕೆಲವು ಶಕ್ತಿಗಳೊಂದಿಗೂ ಸಂಬಂಧ ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿವೆ. ಇವುಗಳಲ್ಲಿ ಜನಸಂಘವನ್ನು ಬಿಟ್ಟು ಜನತಾ ಪಕ್ಷದಲ್ಲಿರುವ ಇತರ ಘಟಕಗಳು, ಮಹಮ್ಮದ್ ಕೋಯಾ ನೇತೃತ್ವದ ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್, ಕ್ಯಾಥೋಲಿಕ್ ಚರ್ಚಿನ ಮುಂದಾಳುತ್ವದ ಒಂದು ವಿಭಾಗ ಮಾತ್ರವಲ್ಲದೆ ಕಾಂಗ್ರೆಸ್ (ಐ) ಪಕ್ಷವೇ ಹೆಚ್ಚು ನಂಬುಗೆಗೆ ಅರ್ಹವಾದ ಮಿತ್ರನೆಂದು ಈವರೆಗೂ ಭಾವಿಸಿಕೊಂಡಿದ್ದ ಆದರೆ ಇದೀಗ ತೀರಾ ನಿರಾಶರಾಗಿರುವ ಬೇರೆ ಬೇರೆ ಜಾತೀಯ ಸಂಘಟನೆಗಳು ಮುಖ್ಯವಾಗಿವೆ.

ಜನತೆಯ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಈ ಎಲ್ಲ ಮಿತ್ರರೂ ತಮ್ಮ ಸರಕಾರಕ್ಕೆ ಸಹಕಾರ ನೀಡಬೇಕೆಂದು ಇಡೀ ಮೈತ್ರಿಕೂಟದ ಪರವಾಗಿ ಮುಖ್ಯಮಂತ್ರಿ ಕಾಂ. ನಾಯನಾರ್ ವಿನಂತಿಸಿಕೊಂಡಿದ್ದಾರೆ. ಹೀಗೆ ತಮ್ಮ ತಮ್ಮ ಪಕ್ಷಗಳಿಗೆ ಮಿತ್ರರನ್ನು ಗಳಿಸಿಕೊಳ್ಳಲು ಒಂದೆಡೆ ಎಡ ಪ್ರಜಾಸತ್ತಾತ್ಮಕ ಶಕ್ತಿಗಳಿಗೂ ಇನ್ನೊಂದೆಡೆ ಕಾಂಗ್ರೆಸ್ (ಐ) ಪಕ್ಷಕ್ಕೂ ನಡುವೆ ತೀವ್ರ ಸಂಘರ್ಷ ನಡೆಯುತ್ತಿದೆ. ಎಡ ಪ್ರಜಾಪ್ರಭುತ್ವವಾದಿ ರಂಗವು ವಿರೋಧ ಪಕ್ಷದಲ್ಲಿರುವ ಪುರೋಗಾಮಿ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳನ್ನು ತನ್ನೆಡೆಗೆ ಗೆದ್ದುಕೊಳ್ಳಲು ಪ್ರಯತ್ನಿಸುತ್ತಿದ್ದರೆ ಕಾಂಗ್ರೆಸ್ (ಐ) ಇತರ ಎಸ ಮತ್ತು

[6ನೇ ಪುಟ ನೋಡಿ]

ಕೇರಳ-ಹೊಸ ಸರಕಾರದ ರಚನೆಯ ಬಳಿಕ

[5ನೇ ಪುಟದಿಂದ]

ಪ್ರಜಾಪ್ರಭುತ್ವವಾದಿ ಶಕ್ತಿಗಳ ಮಾರ್ಕ್ಸಿಸ್ಟ್ ವಿರೋಧಿ ಗಲಿಬಿಲಿಯನ್ನು ದುರುಪಯೋಗಪಡಿಸಿಕೊಳ್ಳಲು ಯತ್ನಿಸುತ್ತಿದೆ. ಇವರಲ್ಲಿ ಯಾರು ತಮ್ಮ ಪ್ರಯತ್ನದಲ್ಲಿ ಜಯಗಳಿಸುತ್ತಾರೆಂಬುದರ ಮೇಲೆ ಕೇರಳದ ರಾಜಕೀಯ ಭವಿಷ್ಯ ನಿರ್ಧಾರವಾಗಲಿದೆ.

ರಾಜ್ಯದ ಸಮಸ್ಯೆಗಳು:

ಮಿತ್ರರನ್ನು ಗೆದ್ದುಕೊಳ್ಳುವ ಸಲುವಾಗಿ ಈ ಎರಡೂ ಪಕ್ಷಗಳು ನಡೆಸುತ್ತಿರುವ ಸ್ಪರ್ಧೆಗೂ ರಾಜ್ಯದ ಅನೇಕ ತುರ್ತಿನ ಹಾಗೂ ದೀರ್ಘ ಸಮಸ್ಯೆಗಳಿಗೂ ನಿಕಟ ಸಂಬಂಧವಿದೆ. ಇವುಗಳಲ್ಲಿ ಉಲ್ಬಣವಾಗುತ್ತಿರುವ ನಿರುದ್ಯೋಗ ಸಮಸ್ಯೆ, ಗ್ರಾಹಕ ವಸ್ತುಗಳ ಕೊರತೆ ಮತ್ತು ಬೆಲೆಯೇರಿಕೆ, ಕೃಷಿ ಉತ್ಪನ್ನಗಳ ಬೆಲೆ ಕುಸಿಯುತ್ತಿರುವುದು, ಗೋಡಂಬಿ ಕೈಗಾರಿಕೆ, ತೆಂಗಿನ ನಾರಿನ ಉದ್ಯಮ, ಕೈಮಗ್ಗ ಮುಂತಾದ ಕೇರಳದ ಸಾಂಪ್ರದಾಯಿಕ ಕೈಗಾರಿಕೆಗಳು ಎದುರಿಸುತ್ತಿರುವ ಮುಗ್ಗಟ್ಟು, ಸರಕಾರ ಅನುಷ್ಠಾನಕ್ಕೆ ತಂದಿರುವ ಧೋರಣೆಗಳನ್ನು ಕಾರ್ಯಗತಗೊಳಿಸುವಲ್ಲಿ ಆಡಳಿತ ಯಂತ್ರದ ವೈಫಲ್ಯ, ರಾಜಕೀಯ ಮತ್ತು ಆಡಳಿತ ಯಂತ್ರಗಳ ಕಾರ್ಯವಿಧಾನದಲ್ಲಿ ಹಾಸುಹೊಕ್ಕಾಗಿರುವ ಭ್ರಷ್ಟಾಚಾರ ಇತ್ಯಾದಿಗಳು ಮುಖ್ಯವಾಗಿವೆ. ಇವುಗಳಲ್ಲಿ ಕೆಲವು ಸಮಸ್ಯೆಗಳ ಬಗ್ಗೆ ಮತ್ತು ಸ್ಥೂಲವಾಗಿ ಅವುಗಳನ್ನು ಹೇಗೆ ಬಗೆಹರಿಸಲಾಗುತ್ತದೆನ್ನುವ ಕುರಿತು ರಾಜ್ಯಪಾಲರವರ ಭಾಷಣದಲ್ಲಿ ಪ್ರಸ್ತಾಪಿಸಲಾಗಿದೆ. ಈಗಾಗಲೇ ಆರಂಭಗೊಂಡಿರುವ ವಿಧಾನಸಭಾ ಅಧಿವೇಶನದಲ್ಲಿ ಇವುಗಳನ್ನು ಕುರಿತು ಇನ್ನಷ್ಟು ಸವಿಸ್ತಾರವಾಗಿ ಚರ್ಚಿಸಲಾಗುವುದು.

ವಿವಿಧ ಪಕ್ಷಗಳ ಕಾರ್ಯವಿಧಾನ:

ಆಡಳಿತ ಮತ್ತು ರಾಜಕೀಯ ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ವಿವಿಧ ಘಟಕಗಳು ತುರ್ತುಗಮನ ಹರಿಸಬೇಕಾದ ಅನೇಕ ಸಮಸ್ಯೆಗಳಿವೆ. ಸಿ. ಪಿ. ಐ. (ಎಂ)ನ ರಾಜ್ಯಸಮಿತಿಯು ಈ ಸಮಸ್ಯೆಗಳ ಕುರಿತು ಈಗಾಗಲೇ ಆರಂಭದ ಹಂತದ ಚರ್ಚೆಗಳನ್ನು ನಡೆಸಿದೆ. ಅದರ ತೀರ್ಮಾನವನ್ನು ಪರಿಶೀಲನೆಗಾಗಿ ಅಥವಾ ಅಗತ್ಯವಿದ್ದರೆ ಸೂಕ್ತ ತಿದ್ದುಪಡಿಗಳಿಗಾಗಿ ಎಡ ಪ್ರಜಾಸತ್ತಾತ್ಮಕ ರಂಗದ ಮುಂದಿರಿಸಲಾಗುವುದು. ಎಡ ಪ್ರಜಾಸತ್ತಾತ್ಮಕ ರಂಗದ ಘಟಕ ಪಕ್ಷಗಳು ಮತ್ತು ಸದಸ್ಯರು ಆಡಳಿತೆಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಯಾವ ರೀತಿ ಒಳಪಟ್ಟು ಕೆಲಸ ಮಾಡಬೇಕೆನ್ನುವುದು ಇಂತಹ ಸಮಸ್ಯೆಗಳಲ್ಲಿ ಒಂದು.

ಸರಕಾರಿ ನೌಕರಿಗೆ ನೇಮಕ, ಅಧಿಕಾರಿಗಳು ಮತ್ತು ನೌಕರರ ವರ್ಗಾವರ್ಗ, ಭಡ್ತಿ, ವಿಶ್ರಾಂತರ ಸೇವಾ ನಿಯಮಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ನಿರ್ದಿಷ್ಟ ನಿಯಮಾವಳಿಗಳಿಗೆ ಒಳಪಟ್ಟಿರಬೇಕೆಂದು ಸಿ. ಪಿ. ಐ. (ಎಂ)ನ ರಾಜ್ಯಸಮಿತಿ ತೀರ್ಮಾನಿಸಿದೆ. ಇಂತಹ ನಿಯಮಾವಳಿಗಳು ಈಗಲೂ ಅಸ್ತಿತ್ವದಲ್ಲಿವೆಯಾದರೂ ಅವುಗಳನ್ನು ಪದೇ ಪದೇ ಉಲ್ಲಂಘಿಸಲಾಗುತ್ತಿದೆ. ಇಂತಹ ವಿಷಯಗಳಿಗೆ ಸಂಬಂಧಿಸಿ ಯಾವುದೇ ವ್ಯಕ್ತಿಯ ಪರವಾಗಿ ಅಥವಾ ವಿರುದ್ಧವಾಗಿ ಹಸ್ತಕ್ಷೇಪ ನಡೆಸಲೂ ಮತ್ತು ಮನವಿಗಳನ್ನು ಮಾಡಲೂ ಆಳುವ ರಂಗದಲ್ಲಿರುವ ಅಥವಾ ವಿರೋಧ ಪಕ್ಷದಲ್ಲಿರುವ ಯಾವ ಪಕ್ಷಕ್ಕೂ ಅವಕಾಶ ನೀಡಬಾರದು. ಜನರ ಜೀವನ ಮಟ್ಟವನ್ನೂ ವಿವಿಧ ವರ್ಗ, ವಿಭಾಗದ ದುಡಿಯುವ ಜನರ ವೇತನಗಳನ್ನೂ ಸುಧಾರಿಸುವಂತಹ ಪ್ರಶ್ನೆಗಳಿಗೆ ಮಾತ್ರವೇ ರಾಜಕೀಯ ಪಕ್ಷಗಳು ತಮ್ಮ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಬೇಕು. ಇದಕ್ಕಾಗಿ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಕಾರ್ಯವಿಧಾನವನ್ನು ಪುನಾರಚಿಸಿಕೊಳ್ಳಬೇಕಾಗಿದೆ ಮತ್ತು ಆಡಳಿತ ಯಂತ್ರವೂ ಸೂಕ್ತ ಬದಲಾವಣೆಗೊಳಪಡಬೇಕಾಗಿದೆ.

ತಿದ್ದಿಕೊಳ್ಳಬೇಕು:

ಸರಕಾರೀ ಯಂತ್ರವು ಮೂಲಭೂತವಾಗಿ ದುಡಿಯುವ ಜನತೆಯ ಮತ್ತು ಮುಖ್ಯವಾಗಿ ಸಿ. ಪಿ. ಐ. (ಎಂ) ನಂತಹ ರಾಜಕೀಯ ಪಕ್ಷಗಳ ವಿರುದ್ಧ ಪೂರ್ವಾಗ್ರಹ ಹೊಂದಿರುವುದನ್ನು ಸಿ. ಪಿ ಐ. (ಎಂ)ನ ರಾಜ್ಯಸಮಿತಿಯು ಗಮನಿಸಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಪಕ್ಷಪಾತಪೂರಿತ ಮತ್ತು ದ್ವೇಷ ಸಾಧನೆಯ ಕ್ರಮಗಳನ್ನು ಕೈಗೊಳ್ಳಲಾಗಿರುವುದನ್ನೂ ಅದು ಗಮನಿಸಿದೆ. 1957ರಲ್ಲಿ ಮತ್ತು 1967ರಲ್ಲಿ 'ಪೋಲೀಸ್ ಪರಿಶೀಲನೆ'ಯ ಕ್ರಮಗಳ ಮೂಲಕ ಎಡಪಕ್ಷಗಳ ಕಡೆಗೆ ಸಹಾನುಭೂತಿಯುಳ್ಳ ಅಪಾರ ಸಂಖ್ಯೆಯ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಅಲ್ಲಗಳೆಯಲಾಯಿತೆಂಬುದನ್ನು ಇಲ್ಲಿ ಸ್ಮರಿಸಬಹುದು. 1957ರಲ್ಲಿ ಮತ್ತು 1967ರಲ್ಲಿ ಅಧಿಕಾರಕ್ಕೆ ಬಂದ ಎಡ ಸರಕಾರಗಳು ಈ ಕ್ರಮವನ್ನು ರದ್ದುಪಡಿಸಿದುದು ಮಾತ್ರವೇ ಅಲ್ಲ, ಅದರಿಂದಾಗಿ ಹಾನಿಗೀಡಾದವರನ್ನು ಬೇರೆ ಉದ್ಯೋಗಗಳಲ್ಲಿ ಸೇರಿಸಿಕೊಳ್ಳಬೇಕಾಯಿತು. ಇದೇ ರೀತಿಯ ಪಕ್ಷಪಾತಪೂರಿತ ಅಥವಾ ದ್ವೇಷ ಸಾಧನೆಯ ಕೆಲವು ಕ್ರಮಗಳು ಈಗಿನ ಸರಕಾರ ಅಧಿಕಾರಕ್ಕೆ ಬರುವ ಮೊದಲು ನಡೆದಿರಬಹುದು. ಹಾಗೇನಾದರೂ ಇದ್ದಲ್ಲಿ ಅವುಗಳನ್ನು ಅವಶ್ಯವಾಗಿ ತಿದ್ದಿಕೊಳ್ಳಬೇಕಾಗಿದೆ. ಸರಕಾರದ ನೀತಿಗೆ ಸಂಬಂಧಪಟ್ಟ ಇತರ ಎಲ್ಲ ಪ್ರಶ್ನೆಗಳಂತೆ ಈ ಬಗ್ಗೆಯೂ ಎಡ ಪ್ರಜಾಸತ್ತಾತ್ಮಕ ರಂಗದ ಘಟಕಗಳು ತಮ್ಮೊಳಗೆ ಚರ್ಚೆನಡೆಸಬೇಕಾಗಿದೆ.

ಈಗ ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್ (ಐ) ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಪಕ್ಷಗಳು ಹಿಂದಿನ ಸರಕಾರದಲ್ಲಿ ಮಹತ್ವದ ಸ್ಥಾನವನ್ನು ಹೊಂದಿದ್ದವು. ಇವುಗಳೆರಡರ ವಿರುದ್ಧವೂ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮತ್ತು ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಅನುಸರಿಸಿದ ಸಾಕಷ್ಟು ಗಂಭೀರ ಆರೋಪಗಳಿವೆ. ಈ ಎಲ್ಲಾ ಅನ್ಯಾಯಗಳನ್ನು ಸರಿಪಡಿಸಿ ಅವುಗಳಲ್ಲಿ ನೊಂದವರಿಗೆ ಪರಿಹಾರ ನೀಡಬೇಕಾದುದು ಎಡ ಪ್ರಜಾಸತ್ತಾತ್ಮಕ ರಂಗಕ್ಕೆ ಸೇರಿದ ಎಲ್ಲಾ ಪಕ್ಷಗಳ ಕರ್ತವ್ಯವಾಗಿದೆ.

○

ಬೊಮ್ಮಸಂದ್ರದಲ್ಲಿ ಕಾರ್ಮಿಕರ ಮುಷ್ಕರ

ಆನೇಕಲ್ ತಾಲ್ಲೂಕಿನಲ್ಲಿರುವ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿರುವ ಕಂಟ್ರೋಲ್ ಎಕ್ವಿಪ್‌ಮೆಂಟಿನ ಕಾರ್ಮಿಕರು ತಮ್ಮ ಮುಖಂಡ ಕಾಂ. ಮಹೇಂದ್ರ ಮೂರ್ತಿಯವರನ್ನು ಕಾನೂನು ಬಾಹಿರವಾಗಿ ಕೆಲಸದಿಂದ ಕಿತ್ತುಹಾಕಿರುವುದನ್ನು ಪ್ರತಿಭಟಿಸಿ ಮುಷ್ಕರಕ್ಕಿಳಿದಿದ್ದಾರೆ.

ಯಶವಂತಪುರದಿಂದ ಮೂರು ತಿಂಗಳುಗಳ ಹಿಂದೆ ಸ್ಥಳಾಂತರ ಹೊಂದಿರುವ ಈ ಫ್ಯಾಕ್ಟರಿಯಲ್ಲಿ ಸಂಘ ಮತ್ತು ಆಡಳಿತ ವರ್ಗದ ನಡುವೆ ಒಳ್ಳೆಯ ಸಾಮರಸ್ಯವಿದ್ದಾಗ್ಯೂ, ಬೊಮ್ಮಸಂದ್ರಕ್ಕೆ ಸ್ಥಳಾಂತರ ಹೊಂದಿದ ಮೇಲೆ ಕಾರ್ಮಿಕ ಸಂಘಟನೆಯನ್ನು ಕುತಂತ್ರದಿಂದ ಹತ್ತಿಕ್ಕುವ ಕಾರ್ಮಿಕ ವಿರೋಧಿ ನೀತಿಯನ್ನು ಈ ಮಾಲೀಕರು ಅನುಸರಿಸುತ್ತಿದ್ದಾರೆ.

ಸಂಘದ ಕಾರ್ಯದರ್ಶಿ ಶಾಂತರೀತಿಯಲ್ಲಿ ಆಡಳಿತ ವರ್ಗದೊಡನೆ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿದ್ದಷ್ಟೂ ಪ್ರಯತ್ನಿಸುತ್ತಿದ್ದರೂ ಮಾಲೀಕರ ಹಠಮಾರಿ ಧೋರಣೆಯಿಂದ ಸಾಧ್ಯವಾಗಿಲ್ಲ.

ಎರಡು ಮೂರು ಸುತ್ತಿನ ಮಾತುಕತೆಗಳು ವಿಫಲಗೊಂಡಾಗ ಕಾರ್ಮಿಕರು ಅನಿವಾರ್ಯವಾಗಿ ಮುಷ್ಕರಕ್ಕಿಳಿದಿದ್ದಾರೆ. ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಲು ಆನೇಕಲ್ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಾದ ಶ್ರೀ ಬಿ. ಎನ್. ವೆಂಕಟರಮಣ ರೆಡ್ಡಿಯವರ ಪ್ರಯತ್ನಕ್ಕೆ ಮಾಲೀಕರಿಂದ ಇನ್ನೂ ಒಳ್ಳೆಯ ಪ್ರತಿಕ್ರಿಯೆ ಬಂದಿಲ್ಲ.

●

ಓದುಗರ ಪತ್ರ:

ಕಾರ್ಮಿಕರ ನರಕಯಾತನೆಗೆ ಯಾರು ಹೊಣೆ?

ಕಳೆದ ಎರಡು ತಿಂಗಳಿಂದ ತಮ್ಮ ನ್ಯಾಯ ಸಮ್ಮತವಾದ ಬೇಡಿಕೆಗಳಿಗಾಗಿ ಹೋರಾಡುತ್ತ ಮೂರನೇ ತಿಂಗಳಲ್ಲಿ ಮುಂದುವರೆಯುತ್ತಿರುವ ದಾಂಡೇಲಿ ಪೇಪರ್ ಮಿಲ್ಲಿನ ಕಾರ್ಮಿಕರ ಸಂಘವು ಅನೇಕ ಕಷ್ಟಗಳಿಗೆ ಎದುರಾಯಿತು. ಅವರ ಮೇಲೆ ಗುಂಡಾಗಳ ಹಾವಳಿಯಾಯಿತು. ಆಡಳಿತ ವರ್ಗವು ಆಶ್ವಾಸನೆ ಇತ್ತು ವಂಚಿಸಿತು. ಇಷ್ಟಾದರೂ ಆಡಳಿತ ವರ್ಗದ ಮೇಲೆ ವಿಶ್ವಾಸವಿಟ್ಟ ಕಾರ್ಮಿಕಸಂಘ "ಪ್ರೊಡಕ್ಷನ್ ಬೋನಸ್ಸಿ"ನ ವಿವಾದವನ್ನು ಸರ್ವೋಚ್ಚ ನ್ಯಾಯಾಲಯದಿಂದಹಿಂತೆಗೆದುಕೊಂಡು ತನ್ನ ಬೇಡಿಕೆಗಳನ್ನು ಈಡೇರಿಸುವುದಾಗಿ ಕೋರಿಕೊಂಡಿತು. ಆದರೂ ವಿಫಲವಾಯಿತು. ಕಾರ್ಮಿಕರ ಈ ನರಕಯಾತನೆಗೆ ಯಾರು ಹೊಣೆ? ಇಂದಿನ ಮಂತ್ರಿಮಂಡಲವೇ ಇದಕ್ಕೆ ಹೊಣೆ!

ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವಾಗ ಬಡವರ ಉದ್ಧಾರದ ಮಾತನ್ನಾಡುವ ಕರ್ನಾಟಕ ರಾಜ್ಯದ ಮಂತ್ರಿಗಳ ಕಿವಿಗೆ ಕಾರ್ಮಿಕರ ಆರ್ತನಾದ ಕೇಳಿಸಲಿಲ್ಲವೇ? ಧಿಕ್ಕಾರವಿರಲಿ ಈ ಕಾಂಗ್ರೆಸ್(ಐ) ಮಂತ್ರಿಮಂಡಲಕ್ಕೆ!

ಕಳೆದ ಎರಡು ತಿಂಗಳಿಂದಲೂ ಕಾರ್ಮಿಕರನ್ನು ಕಷ್ಟಕ್ಕೀಡುಮಾಡಿದ ಆಡಳಿತವರ್ಗ ಮತ್ತು ಅದರ ಮಾಲೀಕ ಸೋಮಾನಿಯ ಅವರ ಮೇಲೆ ಯೋಗ್ಯ ಕ್ರಮ ಕೈಗೊಳ್ಳದ ಸರಕಾರದ ನೀತಿ ಖಂಡನೀಯ. ಇನ್ನುಮೇಲಾದರೂ ಸರಕಾರ ಮತ್ತು ಮಂತ್ರಿಮಂಡಲದ ಕುರುಡು ನೇತ್ರಗಳಿಗೆ ಕಾರ್ಮಿಕರ ನರಕಯಾತನೆ ಗೋಚರಿಸಿ, ಅವರ ನ್ಯಾಯ ಸಮ್ಮತ ಬೇಡಿಕೆಗಳನ್ನು ಈಡೇರಿಸಬೇಕಾಗಿ ಸರಕಾರಕ್ಕೆ ಈ ಮೂಲಕ ಒತ್ತಾಯಿಸುತ್ತೇನೆ.

ಫೆ. 20ರಂದು ಜೀವಾಜಿ ಪುರುಷೋತ್ತಮ ನಾಯಕ್ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ರೈತ ಸಂಘದ ಸಭೆಯ ಠರಾವುಗಳನ್ನು ಜಿಲ್ಲಾಧಿಕಾರಿಗಳಿಗೂ ತಲುಪಿಸಲಾಗಿದೆ. ಜಿಲ್ಲಾಧಿಕಾರಿಗಳು ಮತ್ತು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುತ್ತಾರೆಂದು ಆಶಿಸೋಣವೆ?

—ಎಂ. ಸಮಿಉಲ್ಲಾ

○

ರಾಜ್ಯದ ಮಾಧ್ಯಮಿಕ ಶಾಲಾ ನೌಕರರಿಂದ ಧರಣಿ ಸತ್ಯಾಗ್ರಹ

ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುತ್ತಿರುವ ನೌಕರರ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಏರಿಸಬೇಕು, ಖಾಸಗಿ ಶಾಲೆಗಳ ನೌಕರರಿಗೆ ಸೇವಾ ಭದ್ರತೆಯನ್ನು ಒದಗಿಸಬೇಕು, ಸಿ ಸಿ ಎ. ಮತ್ತು ಹೆಚ್.ಆರ್.ಎ. ಸೌಲಭ್ಯಗಳನ್ನು ರಾಜ್ಯದ ಎಲ್ಲ ಗ್ರಾಮಗಳಿಗೂ ಅನ್ವಯಿಸಬೇಕು, ಪಾರ್ಟ್‌ಟೈಮ್ ಶಿಕ್ಷಕರನ್ನು ಖಾಯಂಗೊಳಿಸಬೇಕು, 10 ವರ್ಷ ಸೇವೆ ಸಲ್ಲಿಸಿದ ಎರಡನೇ ದರ್ಜೆ ಗುಮಾಸ್ತರನ್ನು ಪ್ರಥಮ ದರ್ಜೆ ಗುಮಾಸ್ತರೆಂದು ನೇರವಾಗಿ ಪರಿಗಣಿಸಬೇಕು, ಸಿಲೆಕ್ಷನ ವೇತನ ಶ್ರೇಣಿಯನ್ನು ಮಂಜೂರು ಮಾಡಬೇಕು, ಮಕ್ಕಳಿಗೆ ಹೊರೆಯಾದ ಮತ್ತು ಅವೈಜ್ಞಾನಿಕವಾದ ಪಠ್ಯಕ್ರಮವನ್ನು ತಪ್ಪಿಸಿ ವೈಜ್ಞಾನಿಕ ಪಠ್ಯಕ್ರಮವನ್ನು ಜಾರಿಮಾಡಬೇಕು, ಪಠ್ಯ ಪುಸ್ತಕಗಳನ್ನು ಶಾಲೆಗಳು ಪ್ರಾರಂಭವಾಗುವ ವೇಳೆಗೆ ತಪ್ಪದೆ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು, ಮುಂತಾದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಖಾಸಗಿ ಮಾಧ್ಯಮಿಕ ಶಾಲಾ ನೌಕರರ ಹೋರಾಟದ ಕೇಂದ್ರ ಸಮನ್ವಯ ಸಮಿತಿಯ ಕರೆಯ ಮೇರೆಗೆ ದಿನಾಂಕ 25-2-80ರಂದು ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣಾಧಿಕಾರಿಗಳ ಕಛೇರಿಯ ಮುಂದೆ ಶಿಕ್ಷಕರು ಮತ್ತು ನೌಕರರು ಧರಣಿ ಸತ್ಯಾಗ್ರಹ ನಡೆಸಿದರು. ಜಿಲ್ಲಾಧಿಕಾರಿಗಳಿಗೆ ಮತ್ತು ಡಿ. ಡಿ. ಪಿ. ಐ. ರವರುಗಳಿಗೆ ಬೇಡಿಕೆಯ ಮನವಿಯನ್ನು ಅರ್ಪಿಸಿದ್ದು ತಮ್ಮ ಬೇಡಿಕೆಗಳ ಬಗ್ಗೆ ಶಿಕ್ಷಣ ಇಲಾಖೆಯು ಗಮನ ನೀಡದಿದ್ದಲ್ಲಿ ಹೋರಾಟವನ್ನು ಮುಂದುವರಿಸುವುದಾಗಿ ತಿಳಿಸಲಾಗಿದೆ.

ಎಸ್. ಎಫ್. ಐ. ಬೆಂಬಲ:

ಶಾಲಾ ಶಿಕ್ಷಕರ ಮತ್ತು ನೌಕರರ ಹೋರಾಟವನ್ನು ಬೆಂಬಲಿಸಿ ಇವರ ನ್ಯಾಯಬದ್ಧ ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಒಕ್ಕೂಟ (ಎಸ್. ಎಫ್. ಐ.) ರಾಜ್ಯ ಸಮಿತಿಯ ಸೆಕ್ರೆಟಾರಿಯೇಟ್ ವಿದ್ಯಾಮಂತ್ರಿಗಳಿಗೆ ಮತ್ತು ಡಿ. ಪಿ. ಐ. ರವರಿಗೆ ಒತ್ತಾಯಿಸಿದೆ.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಐ. ಐ. ಎಚ್. ಆರ್. ಕಾರ್ಮಿಕರ ಹೋರಾಟ

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರಲ್ ರೀಸರ್ಚ್ ಕೇಂದ್ರ ಸರ್ಕಾರ ನಡೆಸುತ್ತಿರುವ ಒಂದು ಸಂಶೋಧನಾ ಸಂಸ್ಥೆ. ಕರ್ನಾಟಕದಲ್ಲಿ ಇದರ ಕೇಂದ್ರ ಬೆಂಗಳೂರಿನಿಂದ 16 ಮೈಲಿ ದೂರದಲ್ಲಿರುವ ಹೇಸರಘಟ್ಟ ಎಂಬಲ್ಲಿದೆ. ಇದರ ಒಂದು ಉಪಕೇಂದ್ರ ಕೊಡಗಿನ ಚೆಟ್ಟಳ್ಳಿಯಲ್ಲಿದೆ.

20 ವರ್ಷಗಳಷ್ಟು ದೀರ್ಘಕಾಲದಿಂದ ಇಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಸಿಗುತ್ತಿರುವ ಕೂಲಿ ದಿನಕ್ಕೆ 5 ರೂ. 60 ಪೈಸೆ. ಕಾನೂನು ಪ್ರಕಾರ ದೊರೆಯಬೇಕಾದ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರುವ ಕಾರ್ಮಿಕರೂ ಇನ್ನೂ ಸಹ ದಿನಕೂಲಿಯ ಆಧಾರದಲ್ಲಿ ದುಡಿಯುತ್ತಿದ್ದಾರೆ.

ಬೆಲೆ ಏರಿಕೆಯ ಈ ದಿನಗಳಲ್ಲಿ ಕೇವಲ 5ರೂ. 60 ಪೈಸೆಯಲ್ಲಿ ಜೀವನ ನಡೆಸಬೇಕಾಗಿದೆ. ಈ ಕಾರ್ಮಿಕರು ವಾಸಿಸುವ ಮನೆಗಳು ತುಂಬಾ ಹೀನ ಸ್ಥಿತಿಯಲ್ಲಿದೆ. ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ಸೌಲಭ್ಯವಿಲ್ಲ. ರಕ್ಷಣೆ ಇಲ್ಲ, ಬೋನಸ್ ಇಲ್ಲ. ಕುಡಿಯುವ ನೀರಿನ ಸೌಲಭ್ಯವಿಲ್ಲ. ವಿದ್ಯುತ್ ದೀಪಗಳಿಲ್ಲ. ಹಬ್ಬದ ಹಾಗೂ ರಾಷ್ಟ್ರೀಯ ರಜೆಗಳಿಲ್ಲ. ಪ್ರಾವಿಡೆಂಟ್ ಫಂಡ್ ಸೌಲಭ್ಯವಿಲ್ಲ. ಈ ಎಲ್ಲಾ ಸೌಲಭ್ಯಗಳನ್ನು ನೀಡಬೇಕೆಂದು ಒತ್ತಾಯಿಸಿ 18-2-80ರಿಂದ ಇಲ್ಲಿನ ಕಾರ್ಮಿಕರು ಕೇಂದ್ರ ಸರ್ಕಾರಕ್ಕೆದುರಾಗಿ ಹೋರಾಟಕ್ಕಿಳಿದಿದ್ದಾರೆ.

ಮೊದಲನೆಯ ದಿವಸವೇ 12ಮಂದಿ ಕಾರ್ಮಿಕರನ್ನು ಬಂಧಿಸುವುದರೊಂದಿಗೆ ಪೋಲೀಸರ ದಬ್ಬಾಳಿಕೆ ಪ್ರಾರಂಭಗೊಂಡಿದೆ. ಸಂಸ್ಥೆಯ ಅಧಿಕಾರಿಗಳಿಂದ ಮತ್ತವರ ಏಜೆಂಟರುಗಳಿಂದ ತೀವ್ರ ಕಿರುಕುಳ ಶುರುವಾಗಿದೆ.

ಬೆಂಗಳೂರಿನ ಹೇಸರಘಟ್ಟದಲ್ಲಿನ ಇದೇ ಸಂಸ್ಥೆಯ ಕಾರ್ಮಿಕರೂ ಸಹ ಇಂತಹದೆ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ ಐ.ಐ.ಎಚ್.ಆರ್. ಕಾರ್ಮಿಕರ ಈ ಸಂಯುಕ್ತ ಹೋರಾಟಕ್ಕೆ ರಾಜ್ಯದ ಎಲ್ಲಾ ಕಾರ್ಮಿಕ ಸಂಘಗಳೂ, ಪ್ರಗತಿಪರ ಪ್ರಜಾಸತ್ತಾತ್ಮಕ ಸಂಘಟನೆಗಳೂ ಹಾಗೂ ಸಾರ್ವಜನಿಕರೂ ಸಂಪೂರ್ಣ ಬೆಂಬಲ ನೀಡಿ ಕಾರ್ಮಿಕರ ಈ ಪ್ರಮುಖ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಸಂಘದ ಕಾರ್ಯದರ್ಶಿಗಳಾದ ಡಾ. ಐ. ಆರ್. ಅಸ್ರಣ್ಣ ಮನವಿ ಮಾಡಿದ್ದಾರೆ.

●

ಮಾಲೀಕರ ಉದ್ಧಟತನದ ವಿರುದ್ಧ ಹೋರಾಟ

ಪೀಣ್ಯದಲ್ಲಿರುವ "ಬೆಂಗಳೂರು ಇಂಜಿನೀಯರಿಂಗ್ (ಪ್ರೈ) ಲಿ." ಶ್ರೀ ರಾವ್ ಎಂಬ ಹಠಮಾರಿ ಮಾಲೀಕರ ಉದ್ಧಟತನದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಆ ಫ್ಯಾಕ್ಟರಿಯ ಕಾರ್ಮಿಕರು ದಿನಾಂಕ 11-2-80ರಿಂದ ಸ್ಟೇ ಇನ್‌ಸ್ಟ್ರೈಕ್ ಮಾಡುತ್ತಿದ್ದಾರೆ.

ದಿನಗೂಲಿಯನ್ನು ರದ್ದು ಮಾಡಬೇಕೆನ್ನುವ ಕಾರ್ಮಿಕರ ಒಂದೇ ಒಂದು ಬೇಡಿಕೆಗೆ ಪ್ರತಿಯಾಗಿ ಮಾಲೀಕ 4 ಜನ ಕಾರ್ಮಿಕರನ್ನು ಕಿತ್ತುಹಾಕಿರುವರು. ಮುಷ್ಕರ ಪ್ರಾರಂಭವಾಗಿ 3 ದಿನಗಳವರೆಗೆ ಶ್ರೀ ರಾವ್ ಸುಮಾರು 20 ಜನ ಸೆಕ್ಯುರಿಟಿಯವರನ್ನು, 20ಜನ ಪೋಲೀಸಿನವರನ್ನು ಫ್ಯಾಕ್ಟರಿ ಗೇಟ್ ಎದುರು ನಿಲ್ಲಿಸಿ ಕಾರ್ಮಿಕರಿಗೆ ಊಟ ಮತ್ತು ನೀರನ್ನು ಒಳಗಡೆ ಬಿಡಲು ನಿರಾಕರಿಸಿದರು. ಹಸಿವಿನಿಂದ 3 ದಿನಗಳವರೆಗೆ ಬಳಲಿದ್ದರೂ ಕಾರ್ಮಿಕರು ಈ ಅಮಾನುಷ ವರ್ತನೆಯನ್ನು ಬಲವಾಗಿ ಪ್ರತಿಭಟಿಸುತ್ತಲೇ ಇದ್ದರು. ಯೂನಿಯನ್ ಪ್ರಧಾನ ಕಾರ್ಯದರ್ಶಿ ವಿ. ಪಿ. ಕುಲಕರ್ಣಿಯವರು ಯಶವಂತಪುರ ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಪೀಣ್ಯ ಸಬ್ ಇನ್‌ಸ್ಪೆಕ್ಟರುಗಳನ್ನು ಸಂಪರ್ಕಿಸಿ ವಿಷಯವನ್ನು ಮನದಟ್ಟು ಮಾಡಿ ಊಟ ತಿಂಡಿ ದೊರೆಯುವಂತೆ ನೋಡಿಕೊಂಡರು.

ಇಂದಿಗೆ 18ನೇ ದಿನದಲ್ಲಿ ಮುಂದುವರಿಯುತ್ತಿರುವ ಮುಷ್ಕರವನ್ನು ಜಯಗಳಿಸುವವರೆಗೆ ಮುಂದುವರಿಸಲು ಕಾರ್ಮಿಕರು ದೃಢ ನಿರ್ಧಾರ ಮಾಡಿದ್ದಾರೆ. ಅಕ್ಕಪಕ್ಕದ ಸಿಐಟಿಯು ಯೂನಿಯನ್‌ಗಳಾದ ವಿಂಟ್ರಾಲ್, ಕೆ.ಸಿ.ಐ.ಸಿ, ಮತ್ತು ಮೈಸೂರು ಟೂಲ್ಸ್ ಕಾರ್ಮಿಕ ಸೋದರರ ಸಹಕಾರದಿಂದ ಮುನ್ನಡೆಯುತ್ತಿರುವ ಮುಷ್ಕರಕ್ಕೆ ಆ ವಿಭಾಗದ ಕಾರ್ಮಿಕರ ಸಹಕಾರವನ್ನು ಕಾರ್ಯದರ್ಶಿ ವಿ. ಪಿ. ಕುಲಕರ್ಣಿಯವರು ಕೋರಿದ್ದಾರೆ.

ಸರಕಾರಿ ಹಿಂದುಳಿದ ವಿದ್ಯಾರ್ಥಿಗಳ ಹಾಸ್ಟೆಲ್‌ನಲ್ಲಿ ಭ್ರಷ್ಟಾಚಾರ

ರಾಯಚೂರು ನಗರದಲ್ಲಿ ಜಿಲ್ಲೆಯಾದ್ಯಂತ ವಿದ್ಯಾಭ್ಯಾಸ ಮಾಡಲು ಬಂದಿರುವ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಐದು ಖಾಸಗಿ ಮತ್ತು ಎರಡು ಸರಕಾರಿ ಹಾಸ್ಟೆಲ್‌ನಲ್ಲಿ ವಾಸಮಾಡುತ್ತಿದ್ದಾರೆ. ಪ್ರವೇಶದ ಪ್ರಾರಂಭದಲ್ಲೆ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಕಡ್ಡಾಯವಾಗಿ ರೂ. 50 ನ್ನು ಕಾನೂನು ಬಾಹಿರವಾಗಿ ವಸೂಲು ಮಾಡಿಕೊಂಡಿದ್ದಾರೆ. ಕರ್ನಾಟಕ ರಾಜ್ಯ ಸರಕಾರವು ಈ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಯನ್ನು ನೀಡಬೇಕೆಂದು ಆದೇಶವಿದ್ದರೂ ಖಾಸಗಿ ಹಾಸ್ಟೆಲ್‌ನಲ್ಲಿ ಹಣವನ್ನು ತಿಂಗಳಿಗೊಮ್ಮೆ ರೂ. 50 ರಂತೆ ಹಣವನ್ನು ವಸೂಲು ಮಾಡಿ ಸರಿಯಾದ ಊಟವನ್ನು ಕೊಡದೇ ಸತತವಾಗಿ ಪ್ರತಿ ವರ್ಷ ಶೋಷಣೆ ಮಾಡುತ್ತಿದ್ದಾರೆ ಅದರಲ್ಲೂ ನಗರದ ಸ್ಟೇಷನ್ ರೋಡ್ ಪಕ್ಕದಲ್ಲಿರುವ ಸರಕಾರಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಹಾಸ್ಟೆಲ್‌ನಲ್ಲಿ ಸರಕಾರವು ಪ್ರತಿಯೊಬ್ಬ ವಿದ್ಯಾರ್ಥಿಗೆ ರೂ. 125 ನ್ನು ಖರ್ಚುಮಾಡಬೇಕೆಂದು ಕಾನೂನು ಇದ್ದರೂ ಈ ಸಿಬ್ಬಂದಿ ವರ್ಗವು ಕೇವಲ ರೂ. 70 ಖರ್ಚುಮಾಡಿ ಸರಿಯಾದ ಊಟದ ವ್ಯವಸ್ಥೆಯನ್ನು ಮಾಡದೇ ಪಶುಗಳಿಗೆ ಹಾಕುವ ಆಹಾರವನ್ನು ವಿದ್ಯಾರ್ಥಿಗಳಿಗೆ ಹಾಕುತ್ತಿದ್ದಾರೆ. ಈ ಸರಕಾರಿ ಹಾಸ್ಟೆಲ್‌ನಲ್ಲಿ ಒಟ್ಟು ಎರಡೇ ಎರಡು ರೂಮುಗಳು ಒಂದು ಅಡಿಗೆ ಮನೆ ಮತ್ತು ಒಂದು ವಾರ್ಡನ್ ರೂಮು ಇರುತ್ತದೆ. 96 ವಿದ್ಯಾರ್ಥಿಗಳಿಗೆಲ್ಲ ಪ್ರತಿ ರೂಮಿನಲ್ಲಿ 30 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಕುರಿಗಳಂತೆ ತುಂಬಿ ವಿದ್ಯಾಭ್ಯಾಸ ಮಾಡಲು ಬಹಳಷ್ಟು ಅನಾನುಕೂಲತೆಗಳಾಗಿರುತ್ತದೆ ಉಳಿದ ವಿದ್ಯಾರ್ಥಿಗಳು ಬೇರೆಬೇರೆ ಸ್ಥಳದಲ್ಲಿ ತಮ್ಮ ಸ್ವಂತ ಹಣದಲ್ಲಿ ಖರ್ಚುಮಾಡಿ ರೂಮಿನಲ್ಲಿ ವಾಸಿಸುತ್ತಿದ್ದಾರೆ. ಈ ರೀತಿಯಾಗಿ ಉಳಿದ ಹಣವನ್ನು ಸಿಬ್ಬಂದಿ ವರ್ಗವು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುತ್ತಿದ್ದಾರೆ.

ವಿದ್ಯಾರ್ಥಿಗಳಿಗೆ ಪ್ರತಿದಿನ ಕೊಡುತ್ತಿರುವ ಆಹಾರದಲ್ಲಿ ಕಸ, ಕಡ್ಡಿ, ಕ್ರಿಮಿಕೀಟ, ನುಸಿ ಮತ್ತು ಬಾಲಹುಳ ಮುಂತಾದವುಗಳು ಸೇರಿಕೊಂಡು 'ನಾಯಿ ಹಂದಿಗಳಿಗೆ' ಹಾಕುವ ಊಟವನ್ನು ತಂದು ಮುಂದಿಡುತ್ತಿದ್ದಾರೆ. ಇಂಥ ಆಹಾರವನ್ನು ದಿನನಿತ್ಯ ಸೇವಿಸಿದ್ದಕ್ಕಾಗಿ ಕೆಲವು ವಿದ್ಯಾರ್ಥಿಗಳ ಆರೋಗ್ಯವು ಕೆಟ್ಟು ಒಬ್ಬ ವಿದ್ಯಾರ್ಥಿ 'ಶಸ್ತ್ರಚಿಕಿತ್ಸೆ'ಗೆ ಬಲಿಯಾದನು ಮತ್ತು ಇನ್ನುಳಿದವರು ಆಸ್ಪತ್ರೆಗೆ ಹೋಗಿ ಔಷಧ ಖರ್ಚುಮಾಡಲು ಶಕ್ತಿ ಇಲ್ಲದೆ ಬೇರೆ ಬೇರೆ ರೋಗಗಳಿಗೆ ಅಂದರೆ, ಬೇಧಿ, ವಾಂತಿ, 'ಅಮಿಬಾಯಿಡ್ ಡಿಸೆಂಟರಿ' ಕಾಮಿಣ ರೋಗಗಳಿಗೆ ತುತ್ತಾಗಿದ್ದಾರೆ.

ಖಾಸಗಿ ಮತ್ತು ಸರಕಾರಿ ಹಾಸ್ಟೆಲ್ ಸಿಬ್ಬಂದಿ ವರ್ಗವು ಪ್ರತಿ ತಿಂಗಳಿಗೆ ಶೇಕಡ 25ರಂತೆ ಅಕ್ಕಿ, ಬೇಳೆ, ಎಣ್ಣೆ,

[ಕಡೆಯ ಪುಟ ನೋಡಿ]

ಚಿನ್ನಕ್ಕೆ ಸರಿಯಾದ ಬೆಲೆ ನಿಗದಿ ಮಾಡಲು ಒತ್ತಾಯ

ಕೋಲಾರದ ಚಿನ್ನದ ಗಣಿಯಲ್ಲಿ ಉತ್ಪತ್ತಿಯಾಗುವ ಚಿನ್ನಕ್ಕೆ ಅಂತರ ರಾಷ್ಟ್ರೀಯ ಮಾರುಕಟ್ಟೆಯ ದರದಂತೆ ಬೆಲೆಯನ್ನು ನಿಗದಿ ಮಾಡಿದ್ದು ಈ ಬೆಲೆಯು ಭಾರತದ ಮಾರುಕಟ್ಟೆಯ ಬೆಲೆಗಿಂತ ಬಹಳ ಕಡಿಮೆಯಾಗಿದ್ದು ಈ ಕೈಗಾರಿಕೆಯು ನಷ್ಟವನ್ನು ತೋರಿಸುತ್ತಿದೆ ಮತ್ತು ಕಾರ್ಮಿಕರ ವೇತನ ತೀರಾ ಕಡಿಮೆ ಇದೆ.

ಸಿ. ಐ. ಟಿ ಯು.ವಿನ ಮೈಸೂರು ಮೈನ್ ವರ್ಕರ್ಸ್ ಯೂನಿಯನ್, ಕೆ. ಜಿ. ಎಫ್, ಸರ್ಕಾರವು ತನ್ನ ಬೆಲೆ ನಿಗದಿ ಮಾಡುವ ಧೋರಣೆಯನ್ನು ಬದಲಿಸಿ ಕೋಲಾರದ ಚಿನ್ನದ ಗಣಿಯ ಚಿನ್ನಕ್ಕೆ ಭಾರತ ಮಾರುಕಟ್ಟೆಯ ದರವನ್ನು ಕೊಡಬೇಕೆಂದು ಒತ್ತಾಯಪಡಿಸಿತು. ಸಿ.ಐ.ಟಿ.ಯು.ವಿನ ಅಖಿಲ ಭಾರತಕೇಂದ್ರವು ಈ ದಿಸೆಯಲ್ಲಿ ಭಾರತ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದೆ. ಸಿ ಐ ಟಿ.ಯು ವಿನ ಸತತ ಪ್ರಯತ್ನಗಳಿಂದಾಗಿ ಭಾರತ ಸರ್ಕಾರವು ಕೋಲಾರದ ಚಿನ್ನಕ್ಕೆ ಭಾರತ ಮಾರುಕಟ್ಟೆಯ ಬೆಲೆಯನ್ನು ನಿಗದಿ ಮಾಡಲು ನಿರ್ಧರಿಸಿದೆ.

ಸಿ.ಐ.ಟಿ.ಯು.ವಿನ ಕರ್ನಾಟಕ ರಾಜ್ಯ ಸಮಿತಿಯು ಈ ಬೆಲೆಯನ್ನು ಪೂರ್ವಾನ್ವಯದಂತೆ ಕೊಡಲು ಕೂಡಲೇ ಆಜ್ಞೆ ಹೊರಡಿಸಬೇಕೆಂದು ಭಾರತ ಸರ್ಕಾರವನ್ನು ಆಗ್ರಹ ಪಡಿಸಿದೆ.

●

Statement about ownership and other particulars about Newspaper AIKYARANGA, to be published in the first issu3 every year after the last day of February.

FORM IV

1.	Title of Newspaper	AIKYARANGA
2.	Registration Number of the Newspaper	MAG(2)PRB DECR 319/78-79
3.	Language/Languages in which it is published	Kannada
4.	Periodicity of its publication & the day/days/dates on which it is published	Weekly
5.	Retail price of the Newspaper	40 paise
6.	Publisher's Name Nationality Address of the owners	P. Ramachandra Rao Indian L-56, K. V. Temple Street, Sultanpet BANGALORE-560053
7.	Printer's Name Nationality Address	P. Ramachandra Rao Indian L-56, K. V. Temple Street, Sultanpet BANGALORE-560053
8.	Editor's Name Nationality Address	M. K. Bhat Indian L-56, K. V. Temple Street, Sultanpet BANGALORE-560053
9.	True and precise account of the premises where the Printing is conducted	Nutan Printing, Publishing & Training Centre 405, Sampige Road Malleswaram BANGALORE-560003
10.	Owner's Names	Karnataka State Committee, Communist Party of India(Marxist) L-56, K.V. Temple Street, Sultanpet BANGALORE-560053
11.	Place of Publication	BANGALORE-560053

I, P. RAMACHANDRA RAO hereby declare that the particulars given above are true to the best of my knowledge and belief.

Bangalore
9-3-80

P. RAMACHANDRA RAO
Signature of Publisher

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಕರೆ

[1ನೇ ಪುಟದಿಂದ]

ಗಳನ್ನು ಎದುರಿಸಿ, ಪ್ರಜಾಪ್ರಭುತ್ವವನ್ನು ರಕ್ಷಿಸಿ ತನ್ನ ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯ" ಎಂದು ಅವರು ಹೇಳಿದರು.

"ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮಾಲೀಕರ ವಿರುದ್ಧ ಹೋರಾಡುವುದರ ಜತೆಗೆ, ಆಳುವ ವರ್ಗಗಳ ಕೇಂದ್ರ ಸರ್ಕಾರ, ಇಲ್ಲಿಯ ರಾಜ್ಯಸರ್ಕಾರ ಕಾರ್ಮಿಕ ವರ್ಗದ ಮೇಲೆ ನಡೆಸುವ ದಾಳಿಗಳನ್ನು ಎದುರಿಸಲು ನಾವು ಸಿದ್ಧರಾಗಬೇಕು. ಸದಾ ಹೋರಾಟ ಸನ್ನದ್ಧರಾಗಿರಬೇಕು. ಚಳುವಳಿ-ಹೋರಾಟಗಳನ್ನು ನಡೆಸುತ್ತಾ, ಸಂಘಟನೆಯನ್ನು ಬಲಪಡಿಸುತ್ತಾ, ಬೆಳೆಸುತ್ತಾ ಮುನ್ನಡೆಯೋಣ" ಎಂದು ವರದಿಯನ್ನು ಮಂಡಿಸುತ್ತಾ ಅವರು ಹೇಳಿದರು.

ಎಲ್ಲಾ ಸದಸ್ಯರೂ ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದರು.

ಸೌಹಾರ್ದ ದಿನಾಚರಣೆಗೆ ಕರೆ:

ಹೋರಾಟದ ಕಣದಲ್ಲಿ ಇನ್ನೂ ಸೆಣೆಸುತ್ತಿರುವ ದಾಂಡೇಲಿಯ ಕಾಗದ ಕಾರ್ಖಾನೆಯ ಕಾರ್ಮಿಕರಿಗೆ ಬೆಂಬಲ ಕೊಡಲು, ಹೋರಾಟದಲ್ಲಿರುವ ಕೊಡಗಿನ ಚಟ್ಟಳ್ಳಿಯ ಕಾರ್ಮಿಕರಿಗೆ, ಹೋರಾಡಲು ಪ್ರಾರಂಭಿಸಿರುವ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯ ಬೆಂಗಳೂರು ಆವೃತ್ತಿಯ ನೌಕರರಿಗೆ, ದೀರ್ಘಕಾಲ ಹೋರಾಟದಲ್ಲಿರುವ ರೋರಿಚ್'-ದೇವಿಕಾರಾಣಿ ಒಡೆತನದಲ್ಲಿರುವ ತಾತಗುಣಿ ಎಸ್ಟೇಟಿನ ಹರಿಜನ ಕಾರ್ಮಿಕರಿಗೆ, ರಾಜ್ಯದ ಸ್ಟೈಫಂಡರಿ ಪದವೀಧರರ ಹೋರಾಟಕ್ಕೆ, ಮೈಸೂರಿನ ರೇಷ್ಮೆ ಸಂಶೋಧನೆ ಸಂಸ್ಥೆಯ ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಬೆಂಬಲ ಕೊಡಲು ರಾಜ್ಯಾದ್ಯಂತ ಸಿ.ಐ.ಟಿ.ಯು. ಸಂಘಗಳಿಗೆ ಸೇರಿರುವ ಕಾರ್ಮಿಕರು 12-3-1980 ರಂದು ಸೌಹಾರ್ದದಿನವನ್ನು ಆಚರಿಸಬೇಕೆಂದು ರಾಜ್ಯಸಮಿತಿಯು ಕರೆ ಕೊಟ್ಟಿದೆ.

ಅಂದು 'ಯುಗಾದಿ ಹಬ್ಬದ ಮೊದಲು ಒಂದು ರೇಷನ್ ಕಾರ್ಡಿಗೆ 5 ಕೆ. ಜಿ. ಯಂತೆ ಸಕ್ಕರೆಯನ್ನು ಎಲ್ಲರಿಗೂ ಕೊಡಬೇಕು. ಸಕ್ಕರೆ ಮತ್ತು ಸೀಮೆಎಣ್ಣೆಗಳನ್ನು ನಿರಂತರವಾಗಿ, ಸಕಾಲದಲ್ಲಿ ಎಲ್ಲ ಜನರಿಗೂ ವಿತರಣೆ ಮಾಡಬೇಕು. ಬೆಲೆ ಏರಿಕೆಯನ್ನು ತಡೆಗಟ್ಟಲು, ಏರಿರುವ ಬೆಲೆಗಳನ್ನು ಇಳಿಸಲು ಸರ್ಕಾರವು ಪರಿಣಾಮಕಾರಿಯಾದ ಮತ್ತು ತುರ್ತಿನ ಕ್ರಮಂಗಳನ್ನು ತೆಗೆದುಕೊಳ್ಳಬೇಕು' ಎಂದು ಒತ್ತಾಯಪಡಿಸಬೇಕೆಂದು ರಾಜ್ಯಸಮಿತಿಯು ಕರೆಕೊಟ್ಟಿದೆ.

ಒಂಭತ್ತು ವಿಧಾನಸಭೆಗಳ ವಿಸರ್ಜನೆಯ ಖಂಡನೆ:

ಒಂಭತ್ತು ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸಿದ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಕ್ರಮವನ್ನು ಖಂಡಿಸುವ ನಿರ್ಣಯವೊಂದನ್ನು ಸಭೆಯು ಅಂಗೀಕರಿಸಿದೆ.

ಕೋಲಾರದ ಚಿನ್ನದ ಗಣಿಯಲ್ಲಿ ಉತ್ಪತ್ತಿಯಾಗುವ ಚಿನ್ನಕ್ಕೆ ಸರ್ಕಾರವು ಅಂತರರಾಷ್ಟ್ರೀಯ ಮಾರುಕಟ್ಟೆಯ ಬೆಲೆಯನ್ನು ನಿಗದಿಮಾಡಿದ್ದಿತು. ಈ ಬೆಲೆಯು ಭಾರತದ ಮಾರುಕಟ್ಟೆಯ ಬೆಲೆಗಿಂತ ತೀರಾ ಕಡಿಮೆ ಇದ್ದು ಕೈಗಾರಿಕೆಯು ನಷ್ಟವನ್ನು ತೋರಿಸುತ್ತಿದ್ದಿತು. ಇದರ ಪರಿಣಾಮವಾಗಿ ಚಿನ್ನದ ಗಣಿ ಕಾರ್ಮಿಕರ ವೇತನವು ಬಹಳ ಕಡಿಮೆ ಇದ್ದಿತು.

ಈ ಚಿನ್ನಕ್ಕೆ ಭಾರತದ ಮಾರುಕಟ್ಟೆಯ ಬೆಲೆಯನ್ನೇ ಕೊಡಬೇಕೆಂದು ಸಿ. ಐ. ಟಿ. ಯು. ಭಾರತ ಸರ್ಕಾರವನ್ನು ಒತ್ತಾಯಪಡಿಸುತ್ತಾ ಬಂದಿದ್ದು ಈಗ ಭಾರತ ಸರ್ಕಾರವು ಇದಕ್ಕೆ ಒಪ್ಪಿದೆ.

ಕೋಲಾರ ಚಿನ್ನದ ಗಣಿಯಲ್ಲಿ ಉತ್ಪತ್ತಿಯಾಗಿರುವ ಚಿನ್ನಕ್ಕೆ ಭಾರತದ ಮಾರುಕಟ್ಟೆ ದರವನ್ನು ಪೂರ್ವಾನ್ವಯದಂತೆ ನಿರ್ಣಯಿಸಿ ಕೂಡಲೇ ಆಜ್ಞೆ ಹೊರಡಿಸಬೇಕೆಂದು ಸರ್ಕಾರವನ್ನು ಆಗ್ರಹಪಡಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಅಧ್ಯಕ್ಷ ಕಾಂ ಎಸ್. ಸೂರ್ಯನಾರಾಯಣರು ಮಾತನಾಡುತ್ತಾ ಕಾರ್ಮಿಕ ಸಂಘಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸುವ ಅಗತ್ಯವನ್ನು ಒತ್ತಿಹೇಳಿ, ಕಾರ್ಮಿಕ-ರೈತ ಸಖ್ಯತೆಯನ್ನು ಪ್ರಸ್ತಾಪಿಸಿ ನಮ್ಮ ಸಿ ಐ ಟಿ. ಯು. ಸಂಘಗಳು ತ್ರಿಪುರ ಮತ್ತು ಪಶ್ಚಿಮ ಬಂಗಾಳ ಎಡರಂಗ ಸರ್ಕಾರಗಳ ಸಾಧನೆಗಳನ್ನು ಜನಪ್ರಿಯಗೊಳಿಸಲು ಕರೆ ಇತ್ತರು.

12-3-1980 ರಂದು ನಡೆಯುವ ಸೌಹಾರ್ದ ದಿನಾಚರಣೆಯನ್ನು ಮೆರವಣಿಗೆ ನಡೆಸಿ, ತಹಸೀಲ್ದಾರ್, ಅಸಿಸ್ಟೆಂಟ್ ಕಮಿಷನರ್ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣಿ ಮುಷ್ಕರ, ಬಹಿರಂಗ ಸಭೆಗಳನ್ನು ನಡೆಸಿ, ಸರ್ಕಾರಕ್ಕೆ ಮನವಿ ಕೊಡುವುದರ ಮೂಲಕ ಎಲ್ಲಾ ಸಂಘಗಳೂ ಯಶಸ್ವಿಗೊಳಿಸಬೇಕೆಂದು ಸಭೆಯು ತೀರ್ಮಾನಿಸಿತು.

●

.... ವಿದ್ಯಾರ್ಥಿಗಳ ಹಾಸ್ಟೆಲ್‌ನಲ್ಲಿ ಭ್ರಷ್ಟಾಚಾರ

[7ನೇ ಪುಟದಿಂದ]

ಬ್ರೆಡ್, ಜೋಳ, ಬಾಳೆಹಣ್ಣು, ಇದ್ದಲಿ, ಊಟದ ಪಾತ್ರೆಗಳು, ಚಮಚ, ದಿನನಿತ್ಯ ಓದುವ ಪೇಪರ್, ಹಾಲು ಮುಂತಾದವುಗಳನ್ನು ತಮ್ಮ ತಮ್ಮ ಮನೆಗೆ ಸಾಗಿಸುತ್ತಿದ್ದಾರೆ.

ಈ ಕಳ್ಳ ಸಾಗಾಣಿಕೆಯ ವಿಷಯದಲ್ಲಿ ಹೋದ ವರ್ಷ ಡಿಸೆಂಬರ್ ತಿಂಗಳಲ್ಲಿ ರಾಯಚೂರು ಶಾಖೆಯ ಭಾರತ ವಿದ್ಯಾರ್ಥಿ ಫೆಡರೇಶನ್ ಕಾರ್ಯಕರ್ತರು 25 ಕೆ. ಜಿ. ಅಕ್ಕಿಯನ್ನು ಸ್ಥಳದಲ್ಲೆ ಹಿಡಿದು ಅಧಿಕಾರಿಗಳ ವಶಕ್ಕೆ ಕೊಡಲಾಗಿತ್ತು. ಆದರೂ ಕೂಡ ಮತ್ತೆ ಈ ವರ್ಷವು ಕೂಡ ಇಂಥ ಕಳ್ಳಸಾಗಾಣಿಕೆ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳ ಸಂಬಂಧ ಮತ್ತು ಕುತಂತ್ರದಿಂದ ಸಾಗಿ ವಿದ್ಯಾರ್ಥಿಗಳಿಗೆ ಯಾವುದೇ ಸವಲತ್ತುಗಳು ಸಿಗದಂತಾಗಿದೆ.

ಈ ನೀತಿಯನ್ನು ಅಥವಾ ಊಟದ ವ್ಯವಸ್ಥೆಯಾಗಲಿ ವಸತಿಯ ವಿಷಯವಾಗಲಿ ಯಾರಾದರೂ ಕೇಳಿದರೆ ಅಂಥವರನ್ನು ಮೇಲಧಿಕಾರಿಗಳು ಮತ್ತು ವಾರ್ಡನರು "ನಿನ್ನನ್ನು ಹಾಸ್ಟಲ್ ಬಿಟ್ಟು ಒದ್ದು ಓಡಿಸುವೆವು" ಎಂದು ಹೆದರಿಸುತ್ತಿದ್ದಾರೆ.

ಇಂಥ ಅನ್ಯಾಯ ಮತ್ತು ಭ್ರಷ್ಟಾಚಾರವನ್ನು ಪ್ರತಿಭಟಿಸಲು ದಿನಾಂಕ 28-2-80 ರಂದು ಭಾರತ ವಿದ್ಯಾರ್ಥಿ ಫೆಡರೇಶನ್ ರಾಯಚೂರು ಶಾಖೆಯು ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ಕಾಂಪೌಂಡಿನಲ್ಲಿ ಕಾಂ. ಲಿಂಗಪ್ಪ ಮತ್ತು ವಿಠಲ್ ಹಾಗೂ ಬಸವರಾಜನವರು ಸಂಘಟಿಸಿದ ವಿದ್ಯಾರ್ಥಿಗಳ ಸರ್ವಸಭೆಯನ್ನು ಸಾಯಂಕಾಲ 7-30 ಗಂಟೆಗೆ ಕರೆಯಲಾಗಿತ್ತು. ಸುಮಾರು 55 ವಿದ್ಯಾರ್ಥಿಗಳು ಬಂದು ಭಾಗವಹಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಕೆ. ಪುರುಷೋತ್ತಮನವರು ವಹಿಸಿದ್ದರು. ಅವರು ವಿದ್ಯಾರ್ಥಿಗಳ ಹಾಸ್ಟೆಲ್ ಸಮಸ್ಯೆಯನ್ನು ಮತ್ತು ಸರಕಾರ ಕೊಡುತ್ತಿರುವ ಉಚಿತ ಊಟ ಮತ್ತು ವಸತಿ ದಾನಧರ್ಮಕ್ಕಾಗಿ ಕೊಡುತ್ತಿಲ್ಲಾ ಇದು ನಮ್ಮ ಜನ್ಮಸಿದ್ಧ ಹಕ್ಕು ಎಂದರು. ಸರಕಾರಿ ಅಧಿಕಾರಿಗಳ ಭ್ರಷ್ಟಾಚಾರವನ್ನು ಹೋಗಲಾಡಿಸಲು ಭಾರತ ವಿದ್ಯಾರ್ಥಿ ಫೆಡರೇಶನ್ ನೇತೃತ್ವದಲ್ಲಿ ದಿನಾಂಕ 29-2-80 ರಂದು ಹೋರಾಡಲು ಸಮಿತಿಯು ನಿರ್ಧರಿಸಿತು.

ಆದ್ದರಿಂದ ಬೆಳಿಗ್ಗೆ 10 ಗಂಟೆಗೆ 29 ರಂದು ಸರಕಾರಿ ಹಿಂದುಳಿದ ವರ್ಗದ ಹಾಸ್ಟೆಲ್‌ನಿಂದ ಸುಮಾರು 150 ವಿದ್ಯಾರ್ಥಿಗಳು ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ಬೀದಿಗಳಲ್ಲಿ ಹಾದು ಕರಪತ್ರಗಳನ್ನು ಹಂಚುತ್ತಾ ರಾಯಚೂರು ನಗರದ ಜಿಲ್ಲಾಧಿಕಾರಿಗಳಿಗೆ ಮನವಿಪತ್ರವನ್ನು ಕೊಡಲಾಯಿತು. ಜಿಲ್ಲಾಧಿಕಾರಿಗಳು ಯಾವಾಗಲು ಜನರ, ವಿದ್ಯಾರ್ಥಿಗಳ ಹೋರಾಟ ಬಂದರೆ ಗೈರು ಹಾಜರಿಯಾಗುವುದು ನಮ್ಮಲ್ಲಿ ಸ್ವಾಭಾವಿಕ. ಆದ್ದರಿಂದ HQA ಅಧಿಕಾರಿಗಳೊಂದಿಗೆ ಚರ್ಚೆಮಾಡಿ ಬೇಡಿಕೆಗಳ ಮನವಿಯನ್ನು ಕೊಡಲಾಯಿತು.

ದಿನಾಂಕ 1-3-80ರಂದು ಸರಕಾರಿ ಹಾಸ್ಟೆಲ್‌ಗಳಲ್ಲಿ ಚೆನ್ನಾಗಿ ಊಟದ ವ್ಯವಸ್ಥೆ ಮಾಡಲಾಗಿದೆ. ○

ಸಂಪಾದಕೀಯ

(1ನೇ ಪುಟದಿಂದ)

ಈಗ ಅಧಿಕಾರದ ವರ್ಗಾವಣೆಯ ವಿರುದ್ಧ ದಕ್ಷಿಣ ಆಫ್ರಿಕಾದ ವರ್ಣದ್ವೇಶಿಗಳೂ, ಸಾಮ್ರಾಜ್ಯಶಾಹಿಗಳೂ ಪಿತೂರಿ ನಡೆಸಬಹುದು. ಆದರೆ ಎಚ್ಚೆತ್ತ ಜಿಂಬಾಬ್ವೆ ಜನತೆ ಈ ಪಿತೂರಿಗಳನ್ನೆದುರಿಸಿ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ದ. ಆಫ್ರಿಕಾ ಮತ್ತು ನಮೀಬಿಯಾಗಳಲ್ಲೂ ವರ್ಣದ್ವೇಶೀ ಸರಕಾರಗಳು ಕೊನೆಗೊಳ್ಳುವಂತೆ ಸ್ಫೂರ್ತಿ ನೀಡಲೆಂದು ನಮ್ಮ ಹಾರೈಕೆ. ಜಿಂಬಾಬ್ವೆಯ ವೀರ ಹೋರಾಟಗಾರರಿಗೂ ಅಲ್ಲಿಯ ಜನತೆಗೂ ನಮ್ಮ ಹಾರ್ದಿಕ ಶುಭಾಶಯಗಳು. ○

.... ಪೊಲಿಟ್‌ಬ್ಯೂರೊ ಕರೆ

(1ನೇ ಪುಟದಿಂದ)

ತನ್ನ ತೀವ್ರ ಕಳವಳ ವ್ಯಕ್ತಪಡಿಸಿತು. ಅಧಿಕಾರ ವಹಿಸಿಕೊಂಡು ಒಂದೂವರೆ ತಿಂಗಳಾದರೂ ಸರ್ಕಾರ ಯಾವುದೇ ಆರ್ಥಿಕ ನೀತಿಗಳನ್ನು ಕೈಗೊಂಡಿಲ್ಲ, ಮುಖ್ಯವಾದ ಆರ್ಥಿಕ ಇಲಾಖೆಗಳಿಗೆ ಮುಖ್ಯಸ್ಥರೇ ಇಲ್ಲ ಎಂಬುದನ್ನು ಪೊಲಿಟ್‌ಬ್ಯೂರೊ ತೀವ್ರವಾಗಿ ಗಮನಿಸಿತು. ಆಹಾರ ವಸ್ತುಗಳ ಬೆಲೆ ನಿಯಂತ್ರಣ ಕೇಂದ್ರ ಸರ್ಕಾರಕ್ಕೆ ಸೇರಿದ್ದು. ರಾಜ್ಯ ಸರ್ಕಾರಗಳಿಗೆ ಅವುಗಳಲ್ಲಿ ಯಾವುದೇ ಅಧಿಕಾರವಿಲ್ಲ. ಆದ್ದರಿಂದ ಪ್ರಜಾಪ್ರಭುತ್ವವಾದಿ ಶಕ್ತಿಗಳು ಸಂವಿಧಾನದ ಈ ಕೊರತೆಯನ್ನು ಜನತೆಗೆ ಮನವರಿಕೆ ಮಾಡಿಕೊಟ್ಟು, ಜನತೆಯ ಸಂಕಷ್ಟಗಳಿಗೆ ಕೇಂದ್ರವೇ ಹೊಣೆ ಎಂಬುದನ್ನು ತಿಳಿಸಿಕೊಡಬೇಕೆಂದು ಪೊಲಿಟ್‌ಬ್ಯೂರೊ ಮನವಿ ಮಾಡಿದೆ. ವ್ಯಾಪಾರಿಗಳ ವಿರುದ್ಧ ಸ್ಥಾನಬದ್ಧತಾ ಕಾಯಿದೆಯನ್ನು ಉಪಯೋಗಿಸಿದರೆ ಬೆಲೆ ಇಳಿಯುವ ತಪ್ಪು ಕಲ್ಪನೆಯನ್ನು ಕೇಂದ್ರ ಜನತೆಗೆ ನೀಡುತ್ತಿದೆ ಎಂದು ಪೊಲಿಟ್‌ಬ್ಯೂರೊ ಆಪಾದಿಸಿದೆ.

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಹೆಚ್ಚಿರುವುದರಿಂದ ಭಾರತ ಮತ್ತು ಅದರ ವಿದೇಶಿ ನೀತಿ ಮತ್ತಷ್ಟು ಬಲಗೊಳ್ಳಬೇಕಾಗಿದೆ ಎಂದು ಪೊಲಿಟ್‌ಬ್ಯೂರೊ ಸೂಚಿಸಿತು. ಅಸ್ಸಾಂ ಬಿಕ್ಕಟ್ಟು ಹೆಚ್ಚುತ್ತಿರುವುದರಿಂದ ಪ್ರಧಾನಿ ಇದನ್ನು ಖುದ್ದಾಗಿ ಪರಿಶೀಲಿಸಬೇಕೆಂದು ಅದು ಒತ್ತಾಯಿಸಿದೆ.

ಬೆಲೆ ಏರಿಕೆ, ಪ್ರಜಾಪ್ರಭುತ್ವದ ಮೇಲೆ ಹಲ್ಲೆ ಇವುಗಳನ್ನು ವಿರೋಧಿಸಿ, ರಾಜ್ಯಗಳ ಸ್ವಾಯತ್ತತೆಯನ್ನು ಹೆಚ್ಚಿಸಲು, ಪಕ್ಷದ ಸದಸ್ಯರು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳ ಜೊತೆ ಸೇರಿ ಸಹಕರಿಸಬೇಕೆಂದು ಪೊಲಿಟ್‌ಬ್ಯೂರೊ ಕರೆ ನೀಡುತ್ತದೆ. ಈ ದಿಶೆಯಲ್ಲಿ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳು ಸಹಕರಿಸಿ, ಸರ್ವಾಧಿಕಾರ ವಿರೋಧಿ ಶಕ್ತಿಗಳ ಐಕ್ಯತೆಯನ್ನು ಹೆಚ್ಚಿಸುತ್ತವೆಂದು ಅದು ಆಶಿಸುತ್ತದೆ. ○

ಕುಂದಾಪುರ ಹಂಚಿನ ಕಾರ್ಖಾನೆಗಳ ಕಾರ್ಮಿಕರ ವಿಜಯ

ದ. ಕ. ಜಿಲ್ಲೆ, ಕುಂದಾಪುರ ತಾಲ್ಲೂಕಿನ 12 ಹಂಚಿನ ಕಾರ್ಖಾನೆಗಳ ಮಜೂರರು ತಮ್ಮ ಬೇಡಿಕೆಗಳನ್ನು ಮೆನೇಜುಮೆಂಟಿನ ಮುಂದಿಟ್ಟು ಅದರ ಇತ್ಯರ್ಥಕ್ಕಾಗಿ ಮೆನೇಜುಮೆಂಟಿನವರನ್ನು ಕಳೆದ 1980 ಜನವರಿ ತಿಂಗಳಿನಿಂದ ಒತ್ತಾಯಿಸುತ್ತಾ ಬಂದರೂ ಯಾವುದೇ ಸರಿಯಾದ ತೀರ್ಮಾನಕ್ಕೆ ಬಾರದೆ ಇದ್ದುದರಿಂದ, ಮಜೂರರು ಒಂದು ದಿನದ ಹಾಜರಿಯಿಂದ ಹೆಚ್ಚಿಗೆ ಕೆಲಸ ಮಾಡುವುದನ್ನು ಸ್ಥಗಿತಗೊಳಿಸಿದ ಪರಿಣಾಮವಾಗಿ ಮಾಲಕರು ತಮ್ಮ ಕಾರ್ಖಾನೆಗಳನ್ನು ತಾ. 29-1-80 ರಿಂದ ಸಂಪೂರ್ಣ ಮುಚ್ಚಿದರು.

ಆದರೂ ಮಜೂರರು ಧೃತಿಗೆಡದೆ ತಮ್ಮ ಕೇಳಿಕೆಗಳನ್ನು ಪಡೆಯಲು ಹೋರಾಟವನ್ನು ಮುಂದುವರಿಸಿದರು. ಪರಿಣಾಮವಾಗಿ ಅಸಿಸ್ಟೆಂಟ್ ಲೇಬರ್ ಕಮೀಷನರ ಸಮಕ್ಷಮ ಪಂಚಾಯಿತಿ ಎರಡು, ಮೂರು ಬಾರಿ ಸೇರಿ ಕೊನೆಗೆ ತಾ. 23-2-80 ರಂದು ಈ ಕೆಳಗಿನಂತೆ ಇತ್ಯರ್ಥವಾಯಿತು.

1. ಪ್ರತಿಯೊಬ್ಬ ಮಜೂರರಿಗೂ ದಿನಕ್ಕೆ ರೂ. 2-25 ರಷ್ಟು ಮಜೂರಿ ಹೆಚ್ಚಳ 2. ವರ್ಷದ ಒಟ್ಟು ಸಂಪಾದನೆಯ ಶೇಕಡಾ 15 ರಷ್ಟು ಬೋನಸ್ಸು, ಮಳೆಗಾಲದ 4 ತಿಂಗಳುಗಳಲ್ಲಿ ಕೆಲಸವಿಲ್ಲದಿದ್ದರೆ "ಲೇಆಫ್" ಕೊಡಲಿಕ್ಕಿಲ್ಲವೆಂಬ ಹಿಂದಿನ ಒಪ್ಪಂದದಲ್ಲಿದ್ದ ಶರ್ತವನ್ನು ತೆಗೆದುಹಾಕಲಾಯಿತು. ಈ ಶರ್ತವು ಊರ್ಜಿತದಲ್ಲಿದ್ದಾಗ ಮಜೂರರಲ್ಲಿ ತೀವ್ರ ಅತೃಪ್ತಿಯನ್ನುಂಟುಮಾಡಿತ್ತು.

ಕುಂದಾಪುರ ಹಂಚಿನ ಕಾರ್ಮಿಕರ ಈ ವಿಜಯವು ಜಿಲ್ಲೆಯ ಎಲ್ಲಾ ಹಂಚಿನ ಕಾರ್ಮಿಕರ ಹಾಗೂ ಇತರ ದುಡಿಯುವ ಮಜೂರರ ವಿಜಯವಾಗಿದೆ. ಮಜೂರರ ಈ ಹೋರಾಟಕೆ ಬೆಂಬಲವಿತ್ತ ಜಿಲ್ಲೆಯ ಹಂಚಿನ ಕಾರ್ಮಿಕರನ್ನೂ, ಹಾಗೂ ಊರಿನ ಮಹಾಜನತೆಯನ್ನೂ, ಮಾಲಕರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಹೋರಾಡಿ ವಿಜಯಗಳಿಸಿದ ಕುಂದಾಪುರ ಹಂಚಿನ ಕಾರ್ಮಿಕರನ್ನು ಎಸ್. ಕೆ. ಟ್ಯಾಲ್ ವರ್ಕರ್ಸ್ ಯೂನಿಯನ್ ಅಭಿನಂದಿಸುತ್ತದೆ. ○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR · M. K. BHAT